ಶಮ್ಯಾಪ್ರಾಸ ಪ್ರಕಾಶನದ ಪಂಚಮಪುಷ್ಪ

ಆಜ್ಞಾಪತ್ರ

ಲೇಖಕರು :

ಶ್ರೀ ಶ್ರೀವಿಶ್ವನಂದನತೀರ್ಥ ಶ್ರೀಪಾದರು

ಶಮ್ಯಾಪ್ರಾಸ ಪ್ರಕಾಶನ
ಚಿಕ್ಕಲ್ಲಸಂದ್ರ
ಬೆಂಗಳೂರು - 560 061

ಶಮ್ಯಾಪ್ರಾಸ ಪ್ರಕಾಶನದ ಪಂಚಮಪುಷ್ಪ

ಆಜ್ಞಾಪತ್ರ

ಲೇಖಕರು :
ಶ್ರೀಶ್ರೀವಿಶ್ವನಂದನತೀರ್ಥ ಶ್ರೀಪಾದರು

ಶಮ್ಯಾಪ್ರಾಸ ಪ್ರಕಾಶನ
ಚಿಕ್ಕಲ್ಲಸಂದ್ರ
ಬೆಂಗಳೂರು- 560 061

ಮುನ್ನುಡಿ

ಶ್ರೀಯುತ ಕೆ.ಎನ್. ನಾಗೇಂದ್ರಕುಮಾರ್ ಹಾಗೂ ಶ್ರೀಮತಿ ರಾಜಲಕ್ಷ್ಮಿ ಇವರು ತಮ್ಮ ಮಗಳಾದ ಶ್ರೀಮತಿಮಹಾಲಕ್ಷ್ಮಿ ಇವರ ಸ್ಮರಣಾರ್ಥ ಪುಸ್ತಕಪ್ರಕಾಶನರೂಪದಲ್ಲಿ ಜ್ಞಾನಕಾರ್ಯವನ್ನು ಮಾಡಬೇಕೆಂದು ಇಚ್ಛಿಸಿದ್ದಾರೆ. ಇವರ ಪ್ರಾರ್ಥನೆ ಹಾಗೂ ಅಪೇಕ್ಷೆಯಾದ ವಿಷ್ಣುಭಕ್ತರ ಅವಶ್ಯಕರ್ತವ್ಯಗಳನ್ನು **"ಆಜ್ಞಾಪತ್ರ"** ಎಂಬ ಹೆಸರಿನಲ್ಲಿ ಪ್ರಕಟಿಸುತ್ತಿದ್ದೇವೆ. ಇದರಲ್ಲಿ ಕರ್ಮಾಚರಣೆಯ ಅವಶ್ಯಕತೆ, ಮುಖ್ಯಭಾಗವತಧರ್ಮಗಳಾದ ಗೋಪೀಚಂದನ ಧಾರಣೆ, ಏಕಾದಶೀ ಉಪವಾಸ ಹಾಗೂ ಪರೋಪಕಾರದ ಅವಶ್ಯಕತೆ, ದ್ವಿಜರ ಕರ್ತವ್ಯವಾದ ಸಂಧ್ಯಾವಂದನೆಯ ಅವಶ್ಯಕತೆ, ಮಹತ್ಸೇವಾ ಪ್ರಶಂಸೆ, ಮಹನ್ನಿಂದಾವರ್ಜನ, ನಾಮಸ್ಮರಣೆಗಳು ಸೇರಿವೆ. ಹಾಗೂ ಆರ್ತಭಕ್ತನು ಭಗವಂತನಲ್ಲಿ ಮೊರೆ ಇಡುವ ಕ್ರಮವನ್ನು ಪದ್ಯರೂಪದಲ್ಲಿ ತಿಳಿಸಲಾಗಿದೆ. ಸ್ತ್ರೀಯರಿಗೆ ಅವಶ್ಯಕವಾದ ದಾಸವರ್ಯರಿಂದ ರಚಿತವಾದ ತುಳಸೀ ಸ್ತೋತ್ರಗಳೂ ಸೇರಿವೆ. ಸಜ್ಜನರು ಇವುಗಳ ಉಪಯೋಗವನ್ನು ಪಡೆದುಕೊಂಡಲ್ಲಿ ಆ ಮೂಲಕ ಮೃತರ ಆತ್ಮಕ್ಕೆ ಶಾಂತಿ ದೊರಕಲೆಂದು ನಮ್ಮ ಉಪಾಸ್ಯಮೂರ್ತಿ ಶ್ರೀಲಕ್ಷ್ಮೀಹಯಗ್ರೀವದೇವರಲ್ಲಿ ಪ್ರಾರ್ಥಿಸುತ್ತೇವೆ.

ಇತಿ ನಾರಾಯಣಸ್ಮರಣೆಗಳು

श्री श्री विश्वनन्दनतीर्थ श्रीपादाः

ಶ್ರೀನರಹರಿಸ್ತೋತ್ರ

ಏನಿದು ವೇಷ। ನರಮೃಗೇಶ ॥ಪ॥
ಸಿಂಹಾಸನದ ಮೇಲೆ ಕೂಡುವಂಥವ ನೀನು
ಆ ಹೊಸ್ತಿಲಿನಲಿ ಕುಳಿತಿರುವುದು।
ಅಹಿರಾಜನು ತಾನು ಛತ್ರರೂಪದಿ ಇರಲು
ಮಹಿತವೆ ದ್ವಾರ ಚೌಕು ಛತ್ರತೆರ ॥1॥

ಸಿರಿ ಲಕುಮಿಯು ವೈಜಯಂತಿಮಾಲಾ
ಭರದಿ ಕೊರಳೊಳು ಮೆರೆಯುತಿರಲು।
ದುರುಳರಕ್ಕಸನ ಕರುಳು ಮಾಲೆಯನು
ಕೊರಳೊಳು ಧರಿಸಿ ಮೆರೆಯುತಿರುವೆ ॥2॥

ಅಲಕದಿಂಶೋಭಿತ ಗಂಡಸ್ಥಳವಿರೆ
ಅಲೆದಾಡುತಿಹ ಸಟಾವಿರುವುದೂ ॥
ಬಾಲಕನ ನುಡಿಕೇಳಿ ಕಂಭದಿಂ ಬಂದೆ
ಪ್ರೀತ ಜಗನ್ನಾಥ ವಿಠ್ಠಲರಾಯಾ ॥3॥

★★★★★

ಸ್ತಂಭ ಪಡೆಯಿತೆ ನರಸಿಂಹನನು ಪೇಳಿ।
ಅಂಬೆ ಎಂಬುವಿರಲ್ಲ ಕೌಸಲ್ಯೆ ದೇವಕಿಯ।
ಅಂಬೆ ಅಪ್ಪುಂಟೆ ಜಗದಂಬೆ ರಮಣಗೆ ಇವಗೆ
ಅಂಬುಜೋದ್ಭವ **ಪ್ರೀತಜಗನ್ನಾಥವಿಠ್ಠಲಗೆ** ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

ಶ್ರೀಹನುಮದ್ಭೀಮಮಧ್ವಾಂತರ್ಗತ ಶ್ರೀನರಹರಿರಾಮಕೃಷ್ಣವೇದವ್ಯಾಸಾಯನಮಃ

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇ ॥

ಶ್ರೀಶ್ರೀವಿಶ್ವನಂದನ ತೀರ್ಥರ ಆಜ್ಞಾಪತ್ರ

ಲೇಖನ -1 **ಸತ್ಕರ್ಮಾಚರಣೆ**

''**ಅರಣ್ಯಕಾಚಾರ್ಯ**''ರೆಂದು ಪ್ರಸಿದ್ಧರಾದ ಶ್ರೀಶ್ರೀವಿಷ್ಣುತೀರ್ಥರು ತಮ್ಮ ಶಿಷ್ಯರನ್ನು ಬೋಧಿಸಲು '**ಆಜ್ಞಾಪತ್ರ**' ಎಂಬ ಲೇಖನರೂಪವಾದ ಕಿರುಗ್ರಂಥವನ್ನು ರಚಿಸಿರುತ್ತಾರೆ. ಆದರ ಮಾದರಿಯನ್ನನುಸರಿಸಿ, ದೇಶಕಾಲಗಳನ್ನಾಲೋಚಿಸಿ ಶ್ರೀಶ್ರೀವಿಶ್ವನಂದನ ತೀರ್ಥರು ತಮ್ಮ ಶಿಕ್ಷಣೆಗೆ ಒಳಗಾದ ಸಜ್ಜನವೃಂದವನ್ನು ಉದ್ದೇಶಿಸಿ ಭಗವಂತನ ಪ್ರೇರಣಾನುಸಾರ ಭಗವಂತನ ಪ್ರೀತಿಗಾಗಿ ಬರೆದಿಟ್ಟ ಆಜ್ಞಾಪತ್ರದ ಸರಣಿ ಹೀಗಿದೆ.

ಪ್ರಿಯ ಅಧ್ಯಾತ್ಮಬಂಧುಗಳೇ,

ಸರ್ವಜಗನ್ನಿಯಾಮಕನಾದ ಭಗವನ್ನಾರಾಯಣನು ತನ್ನ ನಾಭಿಕಮಲದಿಂದ ಬ್ರಹ್ಮದೇವರನ್ನು ಪಡೆದು ಬ್ರಹ್ಮಾಂತರ್ಯಾಮಿಯಾಗಿ ಅಶೇಷಜಗತ್ತನ್ನು ನಿರ್ಮಿಸಿರುವನು. ತನ್ನ ಮುಖದಿಂದ ಬ್ರಾಹ್ಮಣರನ್ನೂ, ಬಾಹುಗಳಿಂದ ಕ್ಷತ್ರಿಯರನ್ನೂ, ತೊಡೆಗಳಿಂದ ವೈಶ್ಯರನ್ನೂ, ಪಾದಗಳಿಂದ ಶೂದ್ರರನ್ನೂ ಸೃಷ್ಟಿಸಿರುತ್ತಾನೆ. ಆದರಂತೆ, ತನ್ನ ನಾಲ್ಕು ಮುಖಗಳಿಂದ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಹಾಗೂ ಸಂನ್ಯಾಸ ಎಂಬ ನಾಲ್ಕು ಆಶ್ರಮಗಳನ್ನು ಸೃಷ್ಟಿಸಿರುತ್ತಾನೆ. ಆದರಂತೆ, ನಾಲ್ಕು ಮುಖಗಳಿಂದ ಒಂದೊಂದು ಆಶ್ರಮದಲ್ಲೂ ನಾಲ್ಕುಪ್ರಭೇದಗಳನ್ನು ಸೃಷ್ಟಿಸಿರುತ್ತಾನೆ. ಬ್ರಹ್ಮಚಾರಿಗಳಲ್ಲಿ ಸಾವಿತ್ರ, ಪ್ರಾಜಾಪತ್ಯ, ಬ್ರಾಹ್ಮ, ನೈಷ್ಠಿಕ ಎಂದು ನಾಲ್ಕು ಪ್ರಕಾರ. ಗೃಹಸ್ಥರಲ್ಲಿ ವಾರ್ತಾ, ಅಸಂಚಯ, ಶಾಲೀನ, ಶಿಲೋಂಛ ಎಂದು ನಾಲ್ಕು ಪ್ರಕಾರ. ವಾನಪ್ರಸ್ಥರಲ್ಲಿ ವೈಖಾನಸ, ಉದುಂಬರ, ವಾಲಖಿಲ್ಯ, ಫೇನಪ ಎಂದು ನಾಲ್ಕು ಪ್ರಕಾರ. ಸಂನ್ಯಾಸಿಗಳಲ್ಲಿ ಹಂಸ, ಪರಮಹಂಸ, ಕುಟೀಚಕ, ಬಹೂದಕ ಎಂದು ನಾಲ್ಕು ಪ್ರಕಾರ. ಇವುಗಳಲ್ಲಿ ನೈಷ್ಠಿಕ ಬ್ರಹ್ಮಚರ್ಯವು ಕಲಿಯುಗದಲ್ಲಿ ನಿಷಿದ್ಧವಾಗಿದೆ. ವಾನಪ್ರಸ್ಥ ಆಶ್ರಮವೇ

ನಿಷಿದ್ಧವಾಗಿದೆ. ಸಂನ್ಯಾಸಿಗಳಲ್ಲಿ ಪರಮಹಂಸವೊಂದನ್ನುಳಿದು ಉಳಿದೆಲ್ಲವೂ ನಿಷಿದ್ಧವಾಗಿವೆ.

ಭಗವಂತನು ಆಯಾಯ ವರ್ಣಗಳು ಹಾಗೂ ಆಶ್ರಮಗಳ ಉತ್ಪತ್ತಿಸ್ಥಾನ-ಗಳನ್ನು ಅನುಸರಿಸಿ ಅವರವರಿಗೆ ತಕ್ಕ ಕರ್ಮಗಳನ್ನು ವಿಧಿಸಿರುತ್ತಾನೆ. ಈ ವರ್ಣಾಶ್ರಮಧರ್ಮಗಳ ವಿವರಗಳನ್ನು ಶ್ರೀಮದ್ಭಾಗವತದ ಸಪ್ತಮಸ್ಕಂಧ, ಏಕಾದಶಸ್ಕಂಧಗಳಲ್ಲಿಯೂ, ಶ್ರೀಮನ್ಮಹಾಭಾರತ ಶಾಂತಿಪರ್ವದಲ್ಲಿಯೂ, ಶ್ರೀಮದ್ಭವದ್ಗೀತಾ ಹದಿನೆಂಟನೆಯ ಅಧ್ಯಾಯದಲ್ಲಿಯೂ ಹೇಳಿರುವಂತೆ ತಿಳಿಯತಕ್ಕದ್ದು. ಆಯಾಯ ವರ್ಣಾಶ್ರಮದವರು ಭಗವಂತನನ್ನು ತಮ್ಮ ತಮ್ಮ ವರ್ಣ ಹಾಗೂ ಆಶ್ರಮಧರ್ಮಗಳಿಂದ ಆರಾಧಿಸಬೇಕೆಂಬುದೇ ಸಕಲಧರ್ಮಶಾಸ್ತ್ರಗಳ ನಿಷ್ಕೃಷ್ಟ ಅಭಿಪ್ರಾಯವಾಗಿರುತ್ತದೆ. ಭಗವಂತನನ್ನು ಹೊಂದಲು ಇರುವ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಗಳಲ್ಲಿ, ನಾವು ಕರ್ಮಯೋಗಿ-ಗಳಾಗಿರುವುದರಿಂದ ಸತ್ಕರ್ಮಾಚಾರಣೆಯನ್ನು ಸಾಧ್ಯವಾದಷ್ಟೂ ಮಾಡುತ್ತಾ, ನಿಷಿದ್ಧಾಚರಣೆಯನ್ನು ಬಿಡುತ್ತಾ ಕರ್ಮದಿಂದ ಅಂತಃಕರಣಶುದ್ಧಿಯನ್ನು ಪಡೆದು ನಮ್ಮ ಯೋಗ್ಯತೆ ಇದ್ದಷ್ಟು ಜ್ಞಾನ, ಭಕ್ತಿಗಳ ಮೂಲಕವಾಗಿ (ಅಲ್ಪಜ್ಞಾನ, ಅಲ್ಪಭಕ್ತಿಗಳ ಮೂಲಕ) ಭಗವಂತನ ಪ್ರಸಾದವನ್ನು ಸಂಪಾದಿಸಿಕೊಳ್ಳಬೇಕಾಗಿದೆ. ಆದ್ದರಿಂದ, **ಸತ್ಕರ್ಮಗಳ ಅವಶ್ಯಕತೆಯನ್ನು ಮನಸ್ಸಿಗೆ ತಂದುಕೊಳ್ಳಿರಿ**. ಸದಾಚಾರಸ್ಮೃತಿಯಲ್ಲಿ ಹೇಳಿದಂತೆ ಕರ್ಮಾಚರಣೆಯನ್ನು ಮಾಡಲು ಹೊರಟರೆ ಬೆಳಗಿನಝಾವದಿಂದ ರಾತ್ರಿ ಮಲಗುವವರೆಗೂ ಪುರಸೊತ್ತು ಇಲ್ಲದಷ್ಟು ಆಚರಣೆಗಳಿವೆ. ವೇದೋಕ್ತಸಕಲ-ಕರ್ಮವನ್ನು ದೇವತೆಗಳು ಮಾಡಬಲ್ಲರು; ಅದರ ಅರ್ಧವನ್ನು ಮಾತ್ರ ಋಷಿಗಳು ಮಾಡಬಲ್ಲರು; ಹತ್ತನೆಯ ಒಂದು ಭಾಗವನ್ನು ಮಾತ್ರ ಮನುಷ್ಯರು ಮಾಡಲು ಸಾಧ್ಯ. ಹೀಗೆ ನಮ್ಮ ಸಾಮರ್ಥ್ಯದ ಮಿತಿಯನ್ನರಿತುಕೊಂಡು, ನಾವು **ಕರ್ಮಠರು ಎಂಬ ಅಹಂಕಾರಕ್ಕೆ ಒಳಗಾಗದೇ**, ಭಗವಂತನ ಪ್ರೀತಿಯನ್ನು ಉದ್ದೇಶಿಸಿ, **ಭಗವಂತನ ಪ್ರೇರಣಾನುಸಂಧಾನಪೂರ್ವಕವಾಗಿ** ಯಥಾಶಕ್ತಿ, ''ದೇಶಕಾಲೋಚಿತ-ಧರ್ಮಕರ್ಮಾಸಕ್ತರು'' ಎಂದು ಹೇಳಿದಂತೆ **ಸ್ವವರ್ಣಾಶ್ರಮೋಚಿತ ಕರ್ಮಗಳನ್ನು ನಡೆಸತಕ್ಕದ್ದು.**

ಆಜ್ಞಾಪತ್ರ

ಲೇಖನ -2 ಸಂಧ್ಯಾವಂದನೆಯ ಅವಶ್ಯಕತೆ

ನಾವು ಕರ್ಮಯೋಗಿಗಳಾದ್ದರಿಂದ ಕರ್ಮಾಚರಣೆಯನ್ನು ಮಾಡಲೇಬೇಕೆಂದು ಹೇಳಿದೆವಷ್ಟೆ. ಮೂರುಲೋಕವನ್ನು ಉದ್ಧಾರಮಾಡುವ ಸಾಮರ್ಥ್ಯವಿದ್ದರೂ, ತ್ರಿಕಾಲಜ್ಞಾನಿಯಾಗಿದ್ದರೂ ಶ್ರುತ್ಯುಕ್ತ, ಸ್ಮೃತ್ಯುಕ್ತಕರ್ಮಗಳನ್ನು ಬಿಡಬಾರದೆಂದು ಶ್ರೀಮದಾಚಾರ್ಯರು ಹರಿವಂಶದ ಆಧಾರದಿಂದ ಅಪ್ಪಣೆಯನ್ನು ಮಾಡಿರುತ್ತಾರೆ. ಬ್ರಾಹ್ಮಣನಾಗಿ ಮಾಡಲೇಬೇಕಾದ ಕರ್ಮವು ಯಾವುದೆಂದರೆ - ''**ಸಂಧ್ಯಾವಂದನೆ**''. ನೆನಪಿಡಿರಿ. ಸಂಧ್ಯಾವಂದನೆ ಒಪ್ಪತ್ತು ಅಲ್ಲ, ಎರಡುಹೊತ್ತೂ ಅಲ್ಲ; ಮೂರುಹೊತ್ತಿನಲ್ಲಿಯೂ ಮಾಡಬೇಕಾಗಿದೆ. ಪ್ರಾತಃ ಸಂಧ್ಯಾವಂದನೆಯನ್ನು ಮಾಡದಿದ್ದರೆ ಬ್ರಹ್ಮಹತ್ಯೆಯ ಪಾಪ, ಮಧ್ಯಾನ್ಹದ ಸಂಧ್ಯಾವಂದನೆಯನ್ನುಮಾಡದಿದ್ದರೆ ಸೂರ್ಯಹತ್ಯೆಯ ಪಾಪ, ಸಾಯಂ ಸಂಧ್ಯಾವಂದನೆಯನ್ನು ಮಾಡದಿದ್ದರೆ ಗೋಹತ್ಯೆಯ ಪಾಪ. ಸಂಧ್ಯಾವಂದನೆಗೆ ಕಾಲವೇ ಮುಖ್ಯ. ಶುಚಿಯಾಗಿರಲೀ, ಅಶುಚಿಯಾಗಿರಲೀ ಕಾಲಕ್ಕೆ ಸರಿಯಾಗಿ ಸಂಧ್ಯಾವಂದನೆಯನ್ನು ಮಾಡಬೇಕು. ಹಾಗೆಂದಮಾತ್ರಕ್ಕೆ ರೈಲಿನಲ್ಲೋ, ಬಸ್ಸಿನಲ್ಲೋ ಕುಳಿತು ಪಾಶ್ಚಾತ್ಯ ಉಡುಪನ್ನು ಧರಿಸಿ ಕಾಲಕ್ಕೆ ಸಂಧ್ಯಾವಂದನೆ ಮಾಡಬೇಕು ಎಂದರ್ಥವಲ್ಲ. ವಿಶೇಷವಾದ ಶುಚಿತ್ವವಿಲ್ಲ-ದಿದ್ದರೂ ಕಾಲವನ್ನು ಮೀರಿ ಸಂಧ್ಯಾವಂದನೆಗಿಂತಲೂ ಕಾಲಕ್ಕೆ ಸರಿಯಾಗಿ ಅಲ್ಪಶುಚಿತ್ವದಿಂದಲೇ ಸಂಧ್ಯಾವಂದನೆಯನ್ನು ಮಾಡುವುದರಲ್ಲಿ ತಾತ್ಪರ್ಯ. ಉದಾಹರಣೆಗೆ, ರೋಗದಿಂದಲೋ ವಯೋಧರ್ಮದಿಂದಲೋ ಪ್ರಾತಃಸ್ನಾನವನ್ನು ಮಾಡಲಾಗದಿದ್ದವರು ಕೈಕಾಲುಮುಖತೊಳೆದು ಪಟ್ಟೆ ಮಡಿಯನ್ನೋ, ಧಾವಳಿಯನ್ನೋ ಉಟ್ಟು ಪ್ರಾತಃಸಂಧ್ಯೆಯನ್ನು ಮಾಡಿ, ದೇಹವು ಅವಕಾಶಕೊಟ್ಟಾಗ ಸ್ನಾನವನ್ನು ಮಾಡಿ ಮಧ್ಯಾನ್ಹದ ಸಂಧ್ಯಾವಂದನೆಯನ್ನು ಮಾಡಬಹುದಾಗಿದೆ.

ಮತ್ತೊಂದು ನೆನಪಿಡಬೇಕಾದ ವಿಷಯವೇನೆಂದರೆ, ಕಾಲಕ್ಕೆ ಮುಂಚೆ ಸಂಧ್ಯಾವಂದನೆಯನ್ನು ಮಾಡಬಾರದು. ಕಾಲಾತಿಕ್ರಮಕ್ಕೆ ಪ್ರಾಯಶ್ಚಿತ್ತವಿದ್ದಂತೆ, ಕಾಲವು ಬಾರದಿದ್ದಕ್ಕೆ ಪ್ರಾಯಶ್ಚಿತ್ತವು ಕಂಡುಬಂದಿಲ್ಲ.

ಶಾಲೆಗೋ, ಕಛೇರಿಗೋ ಹೋಗತಕ್ಕವರು ಮಧ್ಯಾನ್ಹದ

ಸಂಧ್ಯಾವಂದನೆಯನ್ನು ಹೇಗೆ ಮಾಡುವುದು ಎಂದು ಶಂಕೆ ಮಾಡಬೇಡಿರಿ. ಮಧ್ಯಾನ್ಹದ ಸಂಧ್ಯಾವಂದನೆಯನ್ನು ಮಾಡಲು ಸೂರ್ಯನು ಮುಳುಗಿದ ಮೇಲೆ 3ಘಂಟೆಗಳ ಕಾಲದವರೆಗೂ ಅವಕಾಶವಿದೆ. ಸಾಯಂಕಾಲ ಶಾಲೆ,ಕಛೇರಿಗಳಿಂದ ಹಿಂದಿರುಗಿದ ಮೇಲಾದರೂ ಮಧ್ಯಾನ್ಹದ ಸಂಧ್ಯಾವಂದನೆಯನ್ನು ಮಾಡಿರಿ. ಬಿಡುವುದಕ್ಕಿಂತ ತಡವಾಗಿ ಮಾಡುವುದು ಲೇಸಲ್ಲವೇ ?

ಮುಸಲ್ಮಾನರೂ ಸಹ ಮೂರುಹೊತ್ತು ನಮಾಜ್ ಮಾಡುವುದನ್ನು ಕಾಣುತ್ತೇವೆ. ಹೀಗಿರುವಾಗ ಋಷಿಗಳ ಹೆಸರಿನ ಗೋತ್ರಗಳನ್ನು ಹೇಳಿಕೊಳ್ಳುತ್ತಿರುವ ನಾವು ಮೂರು ಸಂಧ್ಯೆಗಳನ್ನು ಬಿಡುವುದು ಸರಿಯೇ ?

ಅನೇಕ ಲೌಕಿಕಕಾರ್ಯನಿರ್ಬಂಧಗಳಿಗೆ ಸಿಲುಕಿದ ಅಧ್ಯಾತ್ಮಬಂಧುಗಳೇ ! ನಿಮಗಾಗಿ ದಿನದಲ್ಲಿನ 23ಘಂಟೆ 30 ನಿಮಿಷಗಳನ್ನು ಇರಿಸಿಕೊಳ್ಳಿರಿ. ಸಂಧ್ಯಾ-ವಂದನೆಗಾಗಿ 10x3=30 ನಿಮಿಷಗಳನ್ನು ಕಾದಿರಿಸಿರಿ.

ಬೇರೆ ಯಾವ ಕರ್ಮವನ್ನು ಮಾಡಿರಿ, ಮಾಡದಿರಿರಿ, ಸಂಧ್ಯಾವಂದನೆಯನ್ನು ತ್ರಿಕಾಲದಲ್ಲಿ ಮಾಡುತ್ತಿದ್ದರೆ ಅವನು ಬ್ರಾಹ್ಮಣನೆನಿಸುತ್ತಾನೆ.

ಎಚ್ಚರಿಕೆ ! ಬ್ರಾಹ್ಮಣ್ಯವು ಉಳಿಯಬೇಕಾದರೆ ಸಂಧ್ಯಾವಂದನೆಯನ್ನು ಮಾಡಲೇಬೇಕು. ಹಾಗಿಲ್ಲದಿದ್ದರೆ, ಬದುಕಿರುವಾಗಲೇ ಶೂದ್ರತ್ವವು ಬರುವುದು, ಸಾವಿನ ನಂತರ ನಾಯಿ ಜನ್ಮವು ಬರುತ್ತದೆ.

ಬ್ರಾಹ್ಮಣ್ಯರಕ್ಷಣೆಗೆ ಸಂಧ್ಯಾವಂದನೆಯನ್ನು ಮಾಡುವುದು ಎಷ್ಟು ಆವಶ್ಯಕವೋ, ಹೋಟಲಿನಲ್ಲಿ ತಿನ್ನುವುದನ್ನು ಬಿಡುವುದೂ ಅಷ್ಟೇ ಅವಶ್ಯಕ, ಇದನ್ನು ಮನಸ್ಸಿಗೆ ತಂದು-ಕೊಳ್ಳಿರಿ.

ಲೇಖನ 3 **ಗೋಪೀಚಂದನ ಮಾಹಾತ್ಮೆ**

ಈ ಹಿಂದೆ ಸತ್ಕರ್ಮಾಚರಣೆಯನ್ನು ಮಾಡಲೇಬೇಕೆಂದೂ, ಅದರಲ್ಲೂ ಬ್ರಾಹ್ಮಣರಿಗೆ ಸಂಧ್ಯಾನುಷ್ಠಾನವು ಅತ್ಯವಶ್ಯಕವೆಂದೂ ತಿಳಿಸಿದ್ದೇವೆ. ಯಾವುದೇ ಕರ್ಮವನ್ನು ಮಾಡುವಾಗಲೂ ಗೋಪೀಚಂದವನ್ನು ಧರಿಸದೇ ಮಾಡಬಾರದು; ಗೋಪೀಚಂದನರಹಿತವಾಗಿ ಮಾಡಿದ ಕರ್ಮಗಳು ವ್ಯರ್ಥವಾಗುತ್ತವೆ.

ಒಂದು ದೇಶದ ಸೈನಿಕರು ಧ್ವಜವೊಂದನ್ನು ಧರಿಸುವಂತೆ, ವೈಷ್ಣವಸೇನೆಗೆ ಸೇರಿದ ಎಲ್ಲರೂ ಗೋಪೀಚಂದನದಿಂದ ಊರ್ಧ್ವಪುಂಡ್ರವನ್ನು ಧರಿಸಬೇಕು. ಇದು ನಾವು ವೈಷ್ಣವರೆಂದು ತೋರಿಸುವ ಗುರುತಾಗಿದೆ.

ಗೋಪಿಕೆಯರು ಶ್ರೀಕೃಷ್ಣನ ಶರೀರಕ್ಕೆ ಲೇಪಿಸುತ್ತಿದ್ದ ಚಂದನವು ಮೃತ್ತಿಕೆಯೊಡನೆ ಸೇರಿ ಗೋಪೀಚಂದನವಾಯಿತು. ಇದು ಶ್ರೀಕೃಷ್ಣನ ಸಾಕ್ಷಾತ್ ನಿರ್ಮಾಲ್ಯ. ಆದ್ದರಿಂದಲೇ ಇದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಸಾಸುವೆ ಕಾಳಷ್ಟು ಗೋಪೀಚಂದನವನ್ನು ದಾನಮಾಡಿದರೂ ಮೇರುಪರ್ವತದಷ್ಟು ಭಂಗಾರವನ್ನು ದಾನಮಾಡಿದಷ್ಟು ಪುಣ್ಯವು ಲಭಿಸುವುದು. ಆದ್ದರಿಂದ, ಪವಿತ್ರವಾದ ಏಕಾದಶಿಯಂದು, ಶ್ರಾದ್ಧದಲ್ಲಿ ಹಾಗೂ ದೇವತಾಕಾರ್ಯಗಳಲ್ಲಿ ಗೋಪೀ-ಚಂದನವನ್ನು ದಾನಮಾಡಿರಿ. ಇದಕ್ಕೆ ನಿಮ್ಮ ಗೃಹಗಳಲ್ಲಿ ಯಾವಾಗಲೂ ಹೇರಳವಾಗಿ ಗೋಪೀಚಂದನವನ್ನು ಇಟ್ಟುಕೊಳ್ಳಿರಿ.

ಗೋಪೀಚಂದನವನ್ನು ತಿಲಕವನ್ನಾಗಿ ಹಚ್ಚಿದರೆ ನಾವೂ ನಮ್ಮನಮ್ಮ ಗುಂಪಿನಲ್ಲಿ ತಿಲಕದಂತೆ ಆಗುತ್ತೇವೆ. ಗೋಪೀಚಂದನವನ್ನು ಊರ್ಧ್ವವಾಗಿ ಧರಿಸುವುದರಿಂದ ನಾವೂ ಉನ್ನತಗತಿಗೆ ಹೋಗುತ್ತೇವೆ. ಗೋಪೀಚಂದನವನ್ನು ತಿದ್ದುವುದರಿಂದ ಹಣೇಬರಹವೇ ಅಳಿಸಿಹೋಗುತ್ತದೆ.

ಗೋಪೀಚಂದನವನ್ನು ಧರಿಸಿದವನು ಯಾರನ್ನು ಕಣ್ಣಿನಿಂದ ನೋಡುತ್ತಾನೋ ಅಥವಾ ಕಾಲಿನಿಂದ ಮುಟ್ಟುತ್ತಾನೋ ಅವನೂ ಪಾಪವನ್ನು ಕಳೆದುಕೊಳ್ಳುತ್ತಾನೆ. ಗೋಪೀಚಂದನವನ್ನು ಧರಿಸಿದವನನ್ನು ಯಮದೇವರೂ 'ಈತನು ವಿಷ್ಣುಭಕ್ತ'ನೆಂಬ ಬುದ್ಧಿಯಿಂಧ ಶಿಕ್ಷಿಸದೇ ಬಿಡುತ್ತಾರೆ. ಅಥವಾ ಅಲ್ಪವಾದ ಶಿಕ್ಷೆಯನ್ನು ಕೊಡುತ್ತಾರೆ. ಇದಕ್ಕೆ ನಮ್ಮ ಗುರುಗಳು ಕೊಡುತ್ತಿದ್ದ ಒಂದು ಉದಾಹರಣೆ ಹೀಗಿದೆ- ''ಶಾಲೆಯಲ್ಲಿ ಮಕ್ಕಳು ಕೂಗಿಕೊಳ್ಳುತ್ತಾರೆ. ಆಗ ಉಪಾಧ್ಯಾಯರು ಎಲ್ಲರಿಗೂ ಏಟು ಹೊಡೆಯುತ್ತಾ ಬರುತ್ತಾರೆ. ಅದರ ಮಧ್ಯೆ ಮುಖ್ಯೋಪಾಧ್ಯಾಯರ ಮಗನು ಸೇರಿದ್ದರೆ, ಉಪಾಧ್ಯಾಯನು ಅವನನ್ನು ಕಟುವಾಗಿ ಹೊಡೆಯಲಾರ; ಮೆಲ್ಲಗೆ ಏಟು ತಾಗಿಸುತ್ತಾನೆ. ಅದರಂತೆ, ತಪ್ಪು ಮಾಡಿದವರ ಮಧ್ಯೆ ನಾವೂ ಸೇರಿದ್ದೇವೆ. ಶಿಕ್ಷಿಸುವ

ಯಮದೇವರು ನಮ್ಮ ಹಣೆಯಲ್ಲಿ ಗೋಪೀಚಂದನವನ್ನು ಕಂಡು 'ಇವನು ದೇವರ ಕಡೆಯವನು' ಎಂಬ ದಯಾದಾಕ್ಷಿಣ್ಯದಿಂದ ಕನಿಕರ ತೋರಿಸುತ್ತಾರೆ. ಇದಕ್ಕಾದರೂ ಗೋಪೀಚಂದನವನ್ನು ಧರಿಸಿರಿ.

ಗೋಪೀಚಂದನವನ್ನು ಗಂಡಸರು ಮಾತ್ರ ಧರಿಸಬೇಕೆಂದಲ್ಲ, ಸ್ತ್ರೀಯರೂ ಧರಿಸಬೇಕು. ಸ್ತ್ರೀಯರೆಂದರೆ ವಿಧವಾಸ್ತ್ರೀಯರೆಂದುಕೊಳ್ಳಬೇಡಿ; ಸುಮಂಗಲಿಯರೂ ಅವಶ್ಯವಾಗಿ ಧರಿಸಬೇಕು. ಮದುವೆಯಾದವರು ಮಾತ್ರ ಎಂದು ಭಾವಿಸಬೇಡಿ; ಸಣ್ಣ ಮಕ್ಕಳೂ(ಗಂಡಾಗಲೀ, ಹೆಣ್ಣಾಗಲೀ) ಧರಿಸಬೇಕು. ಸ್ತ್ರೀಯರು ಧರಿಸುವಾಗ ಹಣೆಗೆ ಒಂದೇ ನಾಮ. ಮೊಟಕಾದ ಗೂಟನಾಮವಲ್ಲ; ಹುಬ್ಬಿನ ಮಧ್ಯದಿಂದ ಹೆರಳಿನವರೆಗೆ ನಾಮವನ್ನು ಹಚ್ಚಬೇಕು. ಮಧ್ಯೆ ತಿದ್ದಬೇಕು. ಹೀಗೆ ಮಾಡಿದರೆ, ಅದಕ್ಕೆ ವಿಷ್ಣುಪದವೆಂದು ಹೆಸರು. ಅಲ್ಲಿ ಲಕ್ಷ್ಮೀನಾರಾಯಣರು ವಾಸಿಸುತ್ತಾರೆ. ಮಧ್ಯೆ ತಿದ್ದದಿದ್ದರೆ ಅದು ನಾಯಿಯ ಕಾಲಿಗೆ ಸಮಾನ. ಹೀಗೆ ತಿದ್ದಿದ ನಾಮದ ಮಧ್ಯೆ ಕುಂಕುಮದ ತಿಲಕವನ್ನು ಇಡಬೇಕು. ನೆನಪಿಡಿರಿ; ತಿಲಕವನ್ನು ಹಚ್ಚಬೇಕೇ ಹೊರತು ಬೊಟ್ಟು(ಗುಂಡಗೆ) ಇಡಬಾರದು.

ಬ್ರಾಹ್ಮಣಪುರುಷರಿಗೆ ಹನ್ನೆರಡು ನಾಮಗಳಾದರೆ, ಕ್ಷತ್ರಿಯರಿಗೆ ಹಣೆ, ಎದೆ, ತೋಳುಗಳಲ್ಲಿ ಮಾತ್ರ ನಾಲ್ಕು ನಾಮಗಳು. ವೈಶ್ಯವೈಷ್ಣವರೇ, ನಿಮಗೆ ಎರಡು ನಾಮಗಳು ಮಾತ್ರ; ಹಣೆ ಮತ್ತು ಎದೆಯಲ್ಲಿ. ಶೂದ್ರರಿಗೆ ಹಣೆಯಲ್ಲಿ ಮಾತ್ರ ಒಂದು ನಾಮ. ಹೀಗೆ ನಾಮಧಾರಣೆಯಲ್ಲಿ ವರ್ಣಕ್ಕೆ ತಕ್ಕ ವ್ಯವಸ್ಥೆಯಿದೆ. ಇದನ್ನು ಮೀರದಿರಿ. ಇದನ್ನು ಮೀರಿ ಬ್ರಾಹ್ಮಣೇತರರೂ ಹನ್ನೆರಡು ನಾಮಗಳನ್ನು ಧರಿಸಿದರೆ, ನಿಮ್ಮನ್ನು ನೋಡಿದವರು ನೀವೂ ಬ್ರಾಹ್ಮಣರೆಂದು ತಿಳಿದು ಕೈಮುಗಿದಾರು! ಇದರಿಂದ ನಿಮಗೂ ಪಾಪ, ಕೈಮುಗಿದವರಿಗೂ ಪಾಪ. ಆದ್ದರಿಂದ ನಿಮ್ಮ ಅಧಿಕಾರಕ್ಕೆ ತಕ್ಕಂತೆ ವರ್ತಿಸಿರಿ.

ಲೇಖನ 4. **ಏಕಾದಶೀ ಆಚರಣೆ**

ಈ ಹಿಂದಿನ ಪತ್ರದಲ್ಲಿ ವೈಷ್ಣವರೆಲ್ಲರೂ ಕಡ್ಡಾಯವಾಗಿ ಗೋಪೀಚಂದನವನ್ನು ಧರಿಸಲೇಬೇಕೆಂದು ಹೇಳಿದೆಯಷ್ಟೇ. ಈ ಲೇಖನದಲ್ಲಿ ವೈಷ್ಣವರೆಲ್ಲರೂ ಕಡ್ಡಾಯವಾಗಿ ಆಚರಿಸಲೇಬೇಕಾದ ವ್ರತದ ಪ್ರಸ್ತಾವನೆಯನ್ನು ಮಾಡುತ್ತೇವೆ.

"ವ್ರತೋಪವಾಸಗಳೆಲ್ಲ ಏಕಾದಶಿಯ ಹಿಂದೆ" ಎಂಬ ದಾಸರಾಯರ ನುಡಿಯಂತೆ,ಹಲವು ಸ್ಮೃತಿ, ಪುರಾಣಗಳ ಆಧಾರದಿಂದ ಏಕಾದಶಿಗೆ ಸಮವಾದ ವ್ರತವಿಲ್ಲವೆಂದು ತಿಳಿದು ಬರುತ್ತದೆ. ನಮ್ಮೆಲ್ಲರ ಸ್ವರೂಪೋದ್ಧಾರಕಗುರುಗಳಾದ ಶ್ರೀಮದಾಚಾರ್ಯರು "ಶ್ರೀಕೃಷ್ಣಾಮೃತಮಹಾರ್ಣವ" ಎಂಬ ಗ್ರಂಥದಲ್ಲಿ ಏಕಾದಶಿಯ ಮಹಿಮೆಯನ್ನು ಸಾರಿ ಹೇಳಿದ್ದಾರೆ. ಏಕಾದಶಿಯಂದು ಬ್ರಹ್ಮಾಂಡ-ದಲ್ಲಿರುವ ಎಲ್ಲಾ ಪಾಪಗಳೂ ಅನ್ನವನ್ನು ಆಶ್ರಯಿಸಿರುತ್ತವೆ. ಅನ್ನವೆಂದರೆ ಬೇಯಿಸಿದ್ದ ಅಕ್ಕಿ ಎಂದರ್ಥವಲ್ಲ. ತಿನ್ನುವ ಎಲ್ಲಾ ಪದಾರ್ಥಕ್ಕೂ ಅನ್ನವೆಂದೇ ಹೆಸರು. ಆದ್ದರಿಂದ ಏಕಾದಶಿಯಂದು ಏನನ್ನು ತಿಂದರೂ ಎಲ್ಲಾ ಪಾಪಗಳನ್ನೂ ನಮ್ಮೊಳಗೆ ಆಹ್ವಾನಿಸಿ-ದಂತೆ ಆಗುತ್ತದೆ. ಜಗತ್ತಿನಲ್ಲಿ ಇರುವ ಎಲ್ಲಾ ಪಾಪಗಳೂ ಒಂದೇ ದಿನದಲ್ಲಿ ಬರಬೇಕೆಂದು ಆಸೆ ಇದ್ದರೆ, ಅದಕ್ಕೆ ಸುಲಭೋಪಾಯ ಏಕಾದಶಿ ತಿನ್ನುವುದು ! ಜಗತ್ತಿನಲ್ಲಿ ಇರುವ ಎಲ್ಲಾ ಪಾಪಗಳೂ ಒಂದೇ ಕ್ಷಣದಲ್ಲಿ ಬರಬೇಕೆಂದು ಆಸೆ ಇದ್ದರೆ, ಅದಕ್ಕೆ ಸುಲಭೋಪಾಯ 'ನಾನೇ ದೇವರು' ಎನ್ನುವುದು. ಏಕಾದಶೀ ತಿನ್ನುವುದಕ್ಕಿಂತ ಗೋಮಾಂಸ ತಿನ್ನುವುದು ಲೇಸು; ಬ್ರಹ್ಮಹತ್ಯೆಯು ಲೇಸು; ತನ್ನ ತಾಯಿಯನ್ನೇ ಕೂಡುವುದು ಮೇಲು. ಆದ್ದರಿಂದ ಸರ್ವಥಾ ಏಕಾದಶೀ ತಿನ್ನಬಾರದು. ಏಕಾದಶೀ ತಿನ್ನತಕ್ಕವರು ಮಾತ್ರವಲ್ಲ; ಏಕಾದಶೀ ದಿನದಂದು ತನಗೆ ಅನ್ನವನ್ನು ಸಮರ್ಪಣೆಮಾಡುವುದೂ ಸಹ ತನ್ನ ದ್ರೋಹಿಗಳೆಂದು ಭಗವಂತನ ವಚನವಿರುತ್ತದೆ. ಆದ್ದರಿಂದ ಏಕಾದಶೀ ತಿನ್ನತಕ್ಕವರು ಮಾಡಿದ ಅಡುಗೆಯನ್ನೂ ಉಣ್ಣಬೇಡಿರಿ. ಏಕಾದಶೀಭ್ರಷ್ಟರು ಸಕಲ ಕರ್ಮಗಳಿಗೆ ಬಾಹಿರರು.

ಏಕಾದಶೀ ಬಿಟ್ಟರೆ ಬಹು ಅನರ್ಥವಿದ್ದಂತೆ, ಏಕಾದಶೀ ಮಾಡಿದರೆ ಬಹು ಪ್ರಯೋಜನವುಂಟು. ಹನ್ನೊಂದು ಇಂದ್ರಿಯಗಳಿಂದ ಮಾಡಿದ ಪಾಪಗಳು ಹನ್ನೊಂದನೆಯ ದಿನದ (ಏಕಾದಶಿಯ) ಉಪವಾಸದಿಂದ ಪರಿಹಾರವಾಗುತ್ತದೆ. ಬ್ರಹ್ಮಾಂಡದ ಎಲ್ಲಾ ಪುಣ್ಯಗಳೂ ಏಕಾದಶೀ ಉಪವಾಸದ ಹದಿನಾರನೇ ಒಂದು ಭಾಗಕ್ಕೆ ಸಮನಾಗುವುದಿಲ್ಲ, ಏಕಾದಶೀ ದೀಕ್ಷೆಯ ಮಹಿಮೆಯಿಂದ ಧರ್ಮಾಂಗದನೆಂಬ ರಾಜಪುತ್ರನು ಸಂತಾನವಿಲ್ಲದಿದ್ದರೂ ಉತ್ತಮಗತಿಯನ್ನು

ಹೊಂದಿದ್ದಾನೆ.

ಎಂಟುವರ್ಷದ ಮೇಲ್ಪಟ್ಟು ಎಂಭತ್ತರ ಒಳಗೆ ಇರುವ ಪ್ರತಿಯೊಬ್ಬರೂ ಗಂಡಾಗಲೀ, ಹೆಣ್ಣಾಗಲೀ, ಯಾವವರ್ಣದವರಾಗಲೀ, ಯಾವ ಆಶ್ರಮದವರಾಗಲೀ ವಿಧವೆಯರಾಗಲೀ, ಸುಮಂಗಲಿಯರಾಗಲೀ ನಿರ್ಜಲವಾಗಿ ಏಕಾದಶೀ ಉಪವಾಸ ಮಾಡಬೇಕು. ಹಾಗಿಲ್ಲದಿದ್ದರೆ ಅವರು ಕಳ್ಳರಂತೆ ನಿಗ್ರಹಕ್ಕೆ ಯೋಗ್ಯರು. ಅಶಕ್ತರು ಏನು ಮಾಡಬೇಕೆಂದು ಪ್ರಶ್ನಿಸಿದರೆ, ನಮ್ಮ ಮೈಮೇಲೆ ಅಶಕ್ತಿಯ ಗೋಜು ಹಾಕಿಕೊಂಡು ಏಕಾದಶೀ ಬಿಡುವುದು ಸರಿಯಲ್ಲ. ನಿಜವಾಗಲೂ ಅಶಕ್ತರಾಗಿದ್ದರೆ, ಎಂದರೆ ಮೇಲೆ ಹೇಳಿದ ವಯೋಮಿತಿಯನ್ನು ಮೀರಿದವರಾಗಿದ್ದರೆ, ಹಾಗೆಂದರೆ, ಎಂಟು ವರ್ಷದ ಮಕ್ಕಳು, ಎಂಭತ್ತು ಮೀರಿದ ಮುದುಕರು, ಇದೇ ಅಶಕ್ತರ ಗುಂಪಿಗೆ ಸೇರಿದ ಗರ್ಭಿಣಿಯರು, ಬಾಣಂತಿಯರು ಹಾಗೂ ರೋಗಿಗಳು ಪ್ರಾಣಧಾರಣೆಗಾಗಿ ಕಾಲು ಭಾಗ ಹೊಟ್ಟೆತುಂಬುವಷ್ಟು ಆಹಾರವನ್ನು ಸೇವಿಸಬಹುದು. ಇಂಥಾ ಅಶಕ್ತರೂ ಎಷ್ಟೇ ಎಳೆಮಕ್ಕಳಾಗಿರಲೀ, ಸಾಯುವ ಮುದುಕರಾಗಿರಲೀ, ಹೊಲೆಮನೆಯ ಬಾಣಂತಿಯರಾಗಲೀ, ಅತಿರೋಗಪೀಡಿತರಾಗಲೀ ಅನ್ನವನ್ನು ತಿನ್ನಲು ಸರ್ವಥಾ ಅವಕಾಶವಿರುವುದಿಲ್ಲ. ಭಗವಂತನೇ ಅವರಿಗಾಗಿ ರಿಯಾಯಿತಿಕೊಟ್ಟು ಕೆಲವೊಂದು ಆಹಾರ ಪದಾರ್ಥಗಳನ್ನು ಏಕಾದಶಿಯ ಉಪವಾಸಕ್ಕೆ ಹೇಳಿದ್ದಾನೆ. ಹೆಸರು,ಗೋಧಿ, ಹಾಲು, ಮೊಸರು, ಹಣ್ಣು , ಸಕ್ಕರೆ, ಬೆಲ್ಲ, ತೆಂಗು, ತುಪ್ಪ, ಇವು ಈ ಅನಿಷಿದ್ಧಪದಾರ್ಥಗಳಾಗಿವೆ. ನೆನಪಿಡಿರಿ - ಉದ್ದು, ಕಡಲೆ, ಒಗ್ಗರಣೆ, ಉಪ್ಪಿನ ಪದಾರ್ಥಗಳು, ಅಕ್ಕಿ ಇವು ಸರ್ವಥಾ ನಿಷಿದ್ಧ. ಏಕಾದಶಿಯಂದು ತಿಳಿಯದೇ ಉಪ್ಪಿನ ಪದಾರ್ಥವನ್ನು ಸೇವಿಸಿದರೆ, ಪ್ರಾಯಶ್ಚಿತ್ತವಾಗಿ ಭಗವಂತನಿಗೆ ಲಕ್ಷನಮಸ್ಕಾರ ಮಾಡಬೇಕು. ತಿಳಿದ ಮೇಲೆ ತಿಂದರೆ ಮೂರುಲಕ್ಷ ನಮಸ್ಕಾರ ಮಾಡಬೇಕು. ಎರಡನೆಯ ಸಲಕ್ಕೆ ಆರುಲಕ್ಷ ನಮಸ್ಕಾರ. ಮೂರನೇ ಸಲಕ್ಕೆ ಪ್ರಾಯಶ್ಚಿತ್ತವಿಲ್ಲ; ಅದು ಶಿಕ್ಷಾರ್ಹ. ಆದ್ದರಿಂದ ಸರ್ವಥಾ ಉಪ್ಪಿನ ಪದಾರ್ಥವನ್ನು ಸೇವಿಸುವುದು ಬೇಡ.

ಶಕ್ತರಾದವರು ಅಖಂಡಏಕಾದಶೀವ್ರತ, ದಶಮಿ-ದ್ವಾದಶಿಗಳಂದು ಅಲವಣ ವ್ರತಗಳನ್ನು ಮಾಡಿ ಹೆಚ್ಚಾಗಿ ಭಗವಂತನ ಪ್ರೀತಿಯನ್ನು ಸಂಪಾದಿಸಬಹುದಾಗಿದೆ.

ದಶಮೀವಿದ್ಧವಾದ ಏಕಾದಶಿಯ ಉಪವಾಸದಿಂದ ಗಾಂಧಾರಿ ನೂರು ಮಕ್ಕಳನ್ನು ಕಳೆದುಕೊಂಡಿದ್ದಾಳೆ. ಆದ್ದರಿಂದ ಚೆನ್ನಾಗಿ ಶೋಧಿಸಿ ವಿದ್ಧವಾದ ಏಕಾದಶಿಯನ್ನು ಬಿಟ್ಟು ಶುದ್ಧವಾದ ಏಕಾದಶಿಯನ್ನು ಆಚರಿಸಬೇಕು. ಅನೇಕ ಪಂಚಾಂಗಗಳಲ್ಲಿ ವಿರೋಧವು ಕಂಡುಬಂದು ಬ್ರಾಹ್ಮಣರು ವಿವಾದ ಮಾಡುತ್ತಿದ್ದರೆ ಏಕಾದಶಿಯನ್ನು ಬಿಟ್ಟು ದ್ವಾದಶಿಯಂದು ಉಪವಾಸವನ್ನು ಮಾಡಿ, ತ್ರಯೋದಶಿಯಂದು ಪಾರಣೆ ಮಾಡಬೇಕು; ಇದು ಶ್ರೀಮದಾಚಾರ್ಯರ ಆದೇಶ. ದಶಮೀ ವೇಧೆಯ ಬಗ್ಗೆ ಹಲವಾರು ಸಂಪ್ರದಾಯಭೇದಗಳಿವೆ. ಈ ಸಂಪ್ರದಾಯಭೇದಗಳಿಗೆ ಮಠಗಳೂ, ಮನೆತನಗಳೂ ಮೂಲಕಾರಣವಾಗಿವೆ. ಈ ಸಂಪ್ರದಾಯಭೇದಗಳು ಭಿನ್ನದೇಶ ಭಿನ್ನಕಾಲಗಳಲ್ಲಿ ಉಗಮವಾಗಿದ್ದರಿಂದ, ಹಾಗೂ ಈಗ ಈ ಸಾಂಪ್ರದಾಯಿಕ ಪದಕಗಳಂತೆ ಆರ್ಯಘಳಿಗೆಯನ್ನು ಸಂಪಾದಿಸಿದರೆ ಜ್ಯೋತಿಷ್ಕರು ಒಪ್ಪುವ ಆರ್ಯಘಳಿಗೆಗಳು ಬರುವುದಿಲ್ಲವಾದ್ದರಿಂದ ಆಯಾಯಾ ಸಂಪ್ರದಾಯಗಳು ತತ್ತತ್ಕಾಲದೇಶಗಳಲ್ಲಿ ಮಾನ್ಯವಾಗಿದ್ದರೂ, ಈಗ ಮಾನ್ಯವಲ್ಲವೆಂದು ವಿಮರ್ಶಕರ ಅಭಿಪ್ರಾಯವಾಗಿದೆ. ಆದ್ದರಿಂದ, ಸೂರ್ಯಸಿದ್ಧಾಂತ ಘಳಿಗೆಗಳಿಗೆ ಪದಕದಲ್ಲಿ ಹೇಳಿದ ಅಂತರಘಳಿಗೆಗಳನ್ನು ಸಂಪಾದಿಸುವ ಬದಲು, ನೇರವಾಗಿ ಆರ್ಯಭಟೀಯ ಕರಣಗ್ರಂಥಗಳನ್ನು ಆಧರಿಸಿ ಆರ್ಯಘಳಿಗೆಗಳನ್ನು ಸಂಪಾದಿಸುವುದು ಒಳ್ಳೆಯದು ಎಂದು ನಮ್ಮ ಗುರುಗಳೂ, ನಿಷ್ಪಕ್ಷಪಾತಿಶೋಧಕರೂ ಆದ ಶ್ರೀಶ್ರೀದೇವೇಂದ್ರತೀರ್ಥ ಶ್ರೀಪಾದರ ಅಭಿಪ್ರಾಯವಾಗಿದ್ದಿತು. ಈಚಿನ ವೈಷ್ಣವವಿಮರ್ಶಕಗುರುಗಳು ಕೆಲವರು ದೃಗ್ಗಣಿತವು ವೈಜ್ಞಾನಿಕವಾದ್ದರಿಂದ ಅದರಂತೆಯೇ ಏಕಾದಶಿಯು ಆಚರಣೀಯವೆಂದು ಅಭಿಪ್ರಾಯಪಟ್ಟಿದ್ದಾರೆ. ಅವರಿಗೆ ಅನುಕೂಲವಾಗುವ ವರಾಹಪುರಾಣದ ವಚನವೂ ಇದೆ. ಆದರೆ, ಬಹುತೇಕವೈಷ್ಣವರು ಆರ್ಯಮಾನದಂತೆಯೇ ಏಕಾದಶಿಯು ಆಚರಣೀಯವೆಂದು ಅಭಿಪ್ರಾಯಪಡುತ್ತಿರುವುದರಿಂದಲೂ, ಗ್ರಹಚಾರಗಳ ಬಗ್ಗೆ ಇರುವ ವಿಜ್ಞಾನವಾದವು ಶ್ರೀಮದ್ಭಾಗವತಕ್ಕೆ ನೇರವಿರೋಧಿಯಾದ್ದರಿಂದಲೂ, ಒಂದು ವರಾಹಪುರಾಣದ ವಚನಕ್ಕಿಂತಲೂ ಹಲವಾರು ಆರ್ಯಮಾನವಿಧಾಯಕ ವಚನಗಳಿಗೆ ಬಹುತ್ವನಿಮಿತ್ತಪ್ರಾಬಲ್ಯವಿರುವುದ-

ರಿಂದಲೂ, ಅದೇ ವರಾಹಪುರಾಣದ ವಚನದಂತೆ ನವಮೀವಿದ್ಧದಶಮಿಯನ್ನು ವೈಷ್ಣವರು ತ್ಯಜಿಸುವ ಸಂಪ್ರದಾಯವು ಈಗ ಇಲ್ಲದೇ ಇರುವುದರಿಂದಲೂ ದೃಗ್ಗಣಿತದಂತೆ ಏಕಾದಶಿಯು ಆಚರಣೀಯವಲ್ಲವೆಂದು ನಮ್ಮ ಗುರುಗಳ ಅಭಿಪ್ರಾಯವಾಗಿದ್ದಿತು. ಹಾಗೆಯೇ, ಅರ್ವಾಚೀನ ದಶಮೀವೇಧವಿಷಯಕ ಸಂಪ್ರದಾಯಗಳಿಗಿಂತಲೂ, ಆಚಾರ್ಯರ ಸಾಕ್ಷಾತ್‌ಶಿಷ್ಯರಾದ ಶ್ರೀತ್ರಿವಿಕ್ರಮ-ಪಂಡಿತಾಚಾರ್ಯರ ತಿಥಿನಿರ್ಣಯಗ್ರಂಥದಲ್ಲಿ ಹೇಳಿದ ವೇಧಾನುಷ್ಠಾನಕ್ರಮವು ಸರ್ವಮಾನ್ಯವೆಂದು ಅವರ ಅಭಿಪ್ರಾಯವಾಗಿದ್ದಿತು.

ಇನ್ನು ಮುಂದೆ ಎಂದಾದರೂ ಸಕಲವೈಷ್ಣವರೂ ದೃಗ್ಗಣಿದಂತೆಯೇ ಏಕಾದಶಿಯು ಆಚರಣೀಯುವೆಂದು ಒಮ್ಮತಕ್ಕೆ ಬಂದಲ್ಲಿ, ನಮ್ಮಲ್ಲಿ ವಿಶ್ವಾಸವಿರುವ ನಮ್ಮ ಶಿಷ್ಯಪರಂಪರೆಯವರೂ ಯಾವುದೇ ಆತಂಕವಿಲ್ಲದೇ ಆ ಒಮ್ಮತಕ್ಕೆ ಬೆಲೆಕೊಟ್ಟು ಅದರಂತೆ ಆಚರಿಸಿರಿ. ಹಾಗೆ ಒಮ್ಮತಕ್ಕೆ ಬರದೇ ಇರುವಾಗ ಪ್ರಾಚೀನಪದ್ಧತಿಯನ್ನು ರೂಢಿಸಿಕೊಳ್ಳಿರಿ.

ಶ್ರವಣದ್ವಾದಶೀ, ಅತಿರಿಕ್ತದ್ವಾದಶೀ ಉಪವಾಸಗಳನ್ನು ಯಾವುದೇ ಪೂರ್ವಾಗ್ರಹದಿಂದ ಬಿಡಬೇಡಿರಿ. ಇವುಗಳು ಶ್ರೀಮದಾಚಾರ್ಯರಿಂದ ಉಪವಾಸಕ್ಕೆ ಅರ್ಹವೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿವೆ.

ಏಕಾದಶೀ ಜಾಗರಣೆಯೂ ಅಷ್ಟೇ ಅವಶ್ಯಕ. ಆದರೆ, ಏಕಾದಶಿ ಉಂಡು ಜಾಗರಣಕ್ಕಿಂತ, ಉಪವಾಸಮಾಡಿ ಮಲಗುವುದು ಲೇಸು. ಅಶಕ್ತರು ನಿತ್ಯಕ್ಕಿಂತ ಏಕಾದಶಿಯಂದು ಕಡಿಮೆಯಾದರೂ ನಿದ್ರೆಮಾಡಿ ಯಥಾಶಕ್ತಿ ಜಾಗರಣೆಯನ್ನು ಮಾಡಬಹುದೆಂದು ನಮಗೆ ತೋರುತ್ತದೆ. ಈ ಬಗ್ಗೆ ಮಹನೀಯರ ಅಭಿಪ್ರಾಯವನ್ನು ಪಡೆಯಿರಿ.

''ಏಕಾದಶೀವ್ರತವ ಸಾಧಿಸಿ ಶೋಧಿಸಿ''

ಲೇಖನ 5- **ಪರೋಪಕಾರ**

ಮೂರು ಹಾಗೂ ನಾಲ್ಕನೇ ಪತ್ರಗಳಲ್ಲಿ ವೈಷ್ಣವಧರ್ಮಗಳಾದ ಗೋಪೀಚಂದನ ಧಾರಣೆ ಹಾಗೂ ಏಕಾದಶಿಗಳ ಮಹಾತ್ಮೆಯನ್ನು ತಿಳಿಸಲಾಗಿದೆ.

ಇವುಗಳ ಜೊತೆಯಲ್ಲಿ ಪ್ರತಿಯೊಬ್ಬ ವೈಷ್ಣವನೂ ನಡೆಸಲೇ ಬೇಕಾದ ಮತ್ತೊಂದು ಧರ್ಮವೆಂದರೆ ಪರೋಪಕಾರ, ದೊಡ್ಡವರು 'ಅರ್ಧಶ್ಲೋಕದಿಂದ ಕೋಟಿಗ್ರಂಥಗಳಲ್ಲಿ ಹೇಳಿದ ವಿಷಯವನ್ನು ಹೇಳುತ್ತೇನೆ' ಎಂದು ಪ್ರತಿಜ್ಞೆಮಾಡಿ, ''ಪರೋಪಕಾರವು ಪುಣ್ಯಕ್ಕೆ ಕಾರಣ; ಪರಾಪಕಾರವು ಪಾಪಕ್ಕೆ ಕಾರಣ'' ಎಂದಿದ್ದಾರೆ. ''ಜನಗಳಿಗೆ ಕೃಪೆಮಾಡಿದರೆ ಭಗವಂತನು ಒಲಿಯುತ್ತಾನೆ; ಭಗವಂತನು ಸಂತೋಷಪಟ್ಟರೆ ಇಡೀ ವಿಶ್ವವೇ ಸಂತೋಷಪಡುತ್ತದೆ' ಎಂದು ಹೇಳಿ ಮಹದೇವರು ಜಗತ್ತಿನ ಉಪಕಾರಕ್ಕಾಗಿ ವಿಷಯವನ್ನೇ ಪಾನಮಾಡಿದ್ದಾರೆ. ಲೋಕಕಂಟಕನಾದ ವೃತ್ರಾಸುರನ ಸಂಹಾರವನ್ನು ಮಾಡಲೋಸುಗ ವಜ್ರಾಯುಧ- ನಿರ್ಮಾಣಕ್ಕೋಸ್ಕರ ದಧೀಚಿಋಷಿಗಳು ತಮ್ಮ ದೇಹವನ್ನೇ ತ್ಯಜಿಸಿರುತ್ತಾರೆ. ಪರೋಪಕಾರ ಮಾಡುವುದು ಅಪರೋಕ್ಷಕ್ಕೆ ಕಾರಣವೆಂದು ಶ್ರೀಮದಾಚಾರ್ಯರು ಆರನೇ ಅಧ್ಯಾಯ ಗೀತಾತಾತ್ಪರ್ಯದಲ್ಲಿ ತಿಳಿಸಿರುತ್ತಾರೆ. ಹಿಂದಕ್ಕೆ ಶ್ರೀವಿಜಯದಾಸರು ತಮ್ಮ ಸ್ನಾನಕ್ಕೆ ಸಿದ್ಧಪಡಿಸಿದ್ದ ನೀರನ್ನು ಬಿಸಿಲಿನಿಂದ ಬಳಲಿ ಸಾಯುತ್ತಿದ್ದ ಕತ್ತೆಗೆ ಕುಡಿಸಿದರಂತೆ. ಒಬ್ಬ ಮದುಮಗನು ಸತ್ತಾಗ, ಅವನು ಅನುಬಂಧಿಗಳು ವಿಜಯದಾಸರನ್ನು ಮೊರೆಹೊಕ್ಕರಂತೆ. ಆಗ ಯಾವು ಪುಣ್ಯವನ್ನು ಧಾರೆಯೆರೆದು ಆ ಮದುಮಗನನ್ನು ಬದುಕಿಸಬೇಕೆಂದು ಪ್ರಶ್ನೆಯು ಬಂದಾಗ ಶ್ರೀಗೋಪಾಲದಾಸರು ಕತ್ತೆಯನ್ನು ಬದುಕಿಸಿದ ಪುಣ್ಯವನ್ನು ಕೊಟ್ಟರಾಯಿತು ಎಂದು ಹೇಳಿದರಂತೆ. ಆಗ ಶ್ರೀವಿಜಯದಾಸರು, ''ಭಾಗಣ್ಣ! ಕತ್ತೆಯನ್ನು ಬದುಕಿಸುವ ಅವಕಾಶ ಮತ್ತೆ ದೊರೆಯಲಾರದು; ಆ ಪುಣ್ಯ ನಮಗೇ ಇರಲಿ. ಕಾಶೀಯಾತ್ರೆಯನ್ನು ಮಾಡಿದ ಪುಣ್ಯವನ್ನು ಧಾರೆಯೆರೆಯೋಣ'' ಎಂದು ಹೇಳಿದರಂತೆ. ಇದರಿಂದ ಪರೋಪಕಾರದ ಮಹತ್ತ್ವವು ಗೊತ್ತಾಗುತ್ತದೆ.

ಇಂಥಹದೇ ಉಪಕಾರಮಾಡಬೇಕೆಂಬ ನಿಯಮವಿಲ್ಲ, ಇಂಥಹವರಿಗೆ ಮಾಡಬೇಕೆಂಬ ನಿಯಮವೂ ಇಲ್ಲ, ಸಣ್ಣದೋ, ದೊಡ್ಡದೋ ನಮಗೆ ಕೈಲಾಗುವ ಉಪಕಾರಮಾಡಿ ಪ್ರಾಣಿಸಾಮಾನ್ಯವನ್ನು ಸಂತೋಷಪಡಿಸಿದರೆ ಅದು ಆ ಪ್ರಾಣಿಯ ಅಂತರ್ಯಾಮಿಯ ಪೂಜೆಯಾಗುತ್ತದೆ. ಭಗವಂತನ ಪೂಜೆಯೆಂದರೆ ಮಂಟಪದಲ್ಲಿ ಪ್ರತಿಮೆಯನ್ನಿಟ್ಟು ಆರತಿಯನ್ನು ಬೆಳಗುವುದೆಂದರ್ಥವಲ್ಲ, ಭೂತಗ್ರಾಮ (ಪ್ರಾಣಿ

ಸಮೂಹಕ್ಕೆ) ಅವಮಾನಮಾಡುವವನ ಪ್ರತಿಮಾ ಪೂಜೆಯು ಅಪೂಜಾ ಎನಿಸುವದು ಎಂದು ಕಪಿಲ ದೇವರು ನಿಂದಿಸಿರುತ್ತಾರೆ. ಪ್ರಾಣಿಗಳ, ಅದರಲ್ಲೂ ಮನುಷ್ಯರ, ಅದರಲ್ಲೂ ಬ್ರಾಹ್ಮಣರ, ಅದರಲ್ಲೂ ಯತಿಗಳ ಪೂಜೆಯು (ಸೇವೆಯು) ಭಗವಂತನ ಪೂಜೆಯಾಗುತ್ತದೆ.

ಇದನ್ನು ಮನಗಂಡು ದೊಡ್ಡವರಿಗೆ ವಿನಯದಿಂದ, ಸಮಾನಸ್ಕಂದರಿಗೆ ಪ್ರೀತಿಯಿಂದ, ಚಿಕ್ಕವರಿಗೆ ದಯೆಯಿಂದ ಉಪಕಾರಮಾಡಬೇಕು. ಇದು ಗುರುಕುಲದಲ್ಲಿ ಇದ್ದು ಅಭ್ಯಾಸಮಾಡಬೇಕಾದ ಮುಖ್ಯಪಾಠಗಳಲ್ಲಿ ಒಂದು.

ಪ್ರತಿದಿನ ರಾತ್ರಿ ಮಲಗುವಾಗ ''ಈ ದಿನ ನನ್ನಿಂದ ಯಾರಿಗೆ ಏನು ಉಪಕಾರವಾಯಿತು, ಯಾರಿಗೆ ಏನು ಅಪಕಾರವಾಯಿತೆಂದು ಲೆಕ್ಕಮಾಡಿ-ಕೊಳ್ಳಬೇಕು. ಉಪಕಾರಮನೋವೃತ್ತಿಯನ್ನು ಬೆಳಸಿಕೊಂಡು, ಅಪಕಾರಮನೋ-ವೃತ್ತಿಯನ್ನು ದೂರಮಾಡಿಕೊಳ್ಳಬೇಕು. ಹೀಗೆ ಮಾಡಿದರೆ ಶೀಘ್ರವೇ ದೇವರ ಕೃಪೆಗೆ ಪಾತ್ರರಾಗಬಹುದು.

॥ ಇತಿ ಶಮ್ ॥

ಲೇಖನ- 6 ಸ್ಮರಣವಿಧಿ

ಯಾವಾಗಲೂ ದೇವರಸ್ಮರಣೆಯನ್ನು ಮಾಡುತ್ತಿರಬೇಕು. ಅದಕ್ಕೆ ಆಸನದ ಅಪೇಕ್ಷೆಯಾಗಲೀ, ಮಡಿ ಮೈಲಿಗೆ ಎಂಬ ಬಿಕ್ಕಟ್ಟಾಗಲೀ ಇರುವುದಿಲ್ಲ. ಸಾಮಾನ್ಯವಾಗಿ ಭಗವಂತನ ಸ್ಮರಣೆಗಿಂತಲೂ, ಆಯಾಯ ಕಾಲ, ದೇಶ, ಅವಸ್ಥೆಗಳಲ್ಲಿ ವಿಶೇಷವಾದ ಭಗವಂತನ ನಾಮ, ರೂಪಗಳ ಸ್ಮರಣೆಯು ಮಹಾಫಲಪ್ರದವಾದದ್ದು. ಆದ್ದರಿಂದ, ತಿಳಿದಮಟ್ಟಿಗೆ ತತ್ತತ್ಕಾಲದೇಶಾವಸ್ಥೆಗಳಲ್ಲಿ ಸ್ಮರಿಸಬೇಕಾದ ಭಗವನ್ನಾಮಗಳನ್ನು ಇಲ್ಲಿ ಸಂಗ್ರಹಿಸಿದ್ದೇವೆ. ಇಲ್ಲಿ ಹೇಳಿದ ಪ್ರಕಾರ ಸ್ಮರಣೆ ಮಾಡುವುದನ್ನು ಅಭ್ಯಾಸಮಾಡಿದರೆ ಯಾವ ಕಾಲವೂ ವ್ಯರ್ಥವಾಗುವುದೇ ಇಲ್ಲ. ಹೀಗೆ ಸ್ಮರಿಸುವವರಿಗೆ ಎಲ್ಲಾ ಪಾಪಗಳೂ ಪರಿಹಾರವಾಗುವುದು. ಅಷ್ಟೇ ಅಲ್ಲ; ಅಂತಹವರು ನುಡಿದ ವಚನಗಳು, ಆಶೀರ್ವಾದಗಳೂ ಸತ್ಯವಾಗುವುವು.

ಕಾಲ	ರೂಪ	ಸುಮಾರು ಸಮಯ
ಪ್ರಾತಃಕಾಲದಲ್ಲಿ	ಗದಾಪಾಣಿಯಾದ ಕೇಶವ	ಬೆ.6.00- ಬೆ.8.30
ಸಂಗವಕಾಲದಲ್ಲಿ	ವೇಣುಪಾಣಿ ಗೋವಿಂದ	ಬೆ.8.30- ಬೆ. 11.00
ಮಧ್ಯಾಹ್ನ ಕಾಲದಲ್ಲಿ	ಚಕ್ರಪಾಣಿ ವಿಷ್ಣು	ಬೆ.11.00-ಮ.1.30
ಅಪರಾಹ್ನಕಾಲದಲ್ಲಿ	ಮಧುಸೂಧನ	ಮ.1.30- ಮ.4.00
ಸಾಯಂಕಾಲದಲ್ಲಿ	ಮಾಧವ ಅಥವಾ ನರಸಿಂಹ	ಮ.4.00-ಸಾ.6.00
ಪ್ರದೋಷಕಾಲದಲ್ಲಿ	ಹೃಷಿಕೇಶ	ಸಾ.6.00-ಸಾ.6.30
ರಾತ್ರಿಕಾಲದಲ್ಲಿ	ಶ್ರೀಧರ	ಸಾ.6.30-ರಾ.11.30
ಅರ್ಧರಾತ್ರಿಯಲ್ಲಿ	ಪದ್ಮನಾಭ	ರಾ.11.30-12.30
ಅಪರರಾತ್ರಿಯಲ್ಲಿ	ಶ್ರೀವತ್ಸಲಕ್ಷ್ಮ	ರಾ.12.30-ಬೆ.4.00
ಉಷಃಕಾಲದಲ್ಲಿ	ಖಡ್ಗಪಾಣಿ ಜನಾರ್ದನ	ಬೆ.4.00-ಬೆ.6.00

ಬೆಳಿಗ್ಗೆ ಏಳುವಾಗ 108 ಆವರ್ತಿ ನಾರಾಯಣಸ್ಮರಣೆ; 16ಆವರ್ತಿ ''ಹರೇರಾಮ ಹರೇರಾಮ ರಾಮ ರಾಮ ಹರೇ ಹರೇ।

ಹರೇಕೃಷ್ಣ ಹರೇಕೃಷ್ಣ ಕೃಷ್ಣಕೃಷ್ಣ ಹರೇಹರೇ॥''- ಜಪಿಸಬೇಕು. (ಹಾಸಿಗೆಯ ಮೇಲೆಯೇ ಮಾಡಬಹುದು). ವೃಷಭಾಚಲ, ಅಂಜನಾಚಲ, ಶೇಷಾಚಲ, ವೆಂಕಟಾಚಲ ಸ್ಮರಣೆ. ರಾಮಸೇತು ಸ್ಮರಣೆ. ಗಜೇಂದ್ರಮೋಚಕ ಹರಿಸ್ಮರಣೆ. ಅನಂತರ ದೇವರಿಗೆ ತುಲಸಿಗೆ ನಮಸ್ಕಾರ.

ಶೌಚಕಾಲದಲ್ಲಿ - ಮಾಧವ; ಮೃತ್ತಿಕಾಶೌಚಕಾಲದಲ್ಲಿ- ತ್ರಿವಿಕ್ರಮ; ಮುಖತೊಳೆಯುವಾಗ- ಮಾಧವ; ಹಲ್ಲುಜ್ಜುವಾಗ- ಎಂಟುಭುಜವುಳ್ಳ ಶ್ರೀಹರಿ; ಗೋಸೇವೆ ಮಾಡುವಾಗ- ಗೋಪಾಲಸ್ವಾಮಿ; ಸ್ನಾನಮಾಡುವಾಗ ವರಾಹ, ಪ್ರಯಾಗಮಾಧವ, ಗಂಗಾಜನಕ ತ್ರಿವಿಕ್ರಮರ ಸ್ಮರಣೆ; ಒದ್ದೆವಸ್ತ್ರವನ್ನು ಉಡುವಾಗ ಉಪೇಂದ್ರ; ಒಣಗಿದ ವಸ್ತ್ರವನ್ನು ಧರಿಸುವಾಗ ವಾಸುದೇವ; ವಸ್ತ್ರದಲ್ಲಿ ಮಾನದ ಎಂಬ ದೇವರು; ಗೋಪೀಚಂದನ ಧರಿಸುವಾಗ ಭೂವರಾಹ, ಹನ್ನೆರಡು ನಾಮಗಳಲ್ಲಿ ಶುಕ್ಲಪಕ್ಷದಲ್ಲಿ ಕೇಶವಾದಿ ಹನ್ನೆರಡು ರೂಪಗಳು; ಕೃಷ್ಣಪಕ್ಷದಲ್ಲಿ

ಸಂಕರ್ಷಣಾದಿ ಹನ್ನೆರಡು ರೂಪಗಳು; ಸ್ತ್ರೀಯರಿಗೆ, ಶೂದ್ರರಿಗೆ ಹಣೆಯಲ್ಲಿ ಒಂದೇ ನಾಮ - ನಾರಾಯಣ, ವೈಶ್ಯರಿಗೆ ಹಣೆಗೊಂದು ನಾಮ, ಎದೆಗೊಂದು ನಾಮ- ಕೇಶವ ಮತ್ತು ವಿಷ್ಣು.

ಮುದ್ರೆ ಧರಿಸುವಾಗ -

ಚಕ್ರದಲ್ಲಿ- ದುರ್ಗಾಪತಿ ಕೃದ್ಧೋಲ್ಕ, ಹಿಂಕಾರ ಪ್ರದ್ಯುಮ್ನ,

ಶಂಖದಲ್ಲಿ- ಅಂಭೃಣೀಪತಿ ಮಹೋಲ್ಕ, ಪ್ರತಿಹಾರ ಅನಿರುದ್ಧ,

ಗದೆಯಲ್ಲಿ- ಲಕ್ಷ್ಮೀಪತಿ ವೀರೋಲ್ಕ, ನಿಧನ ಸಂಕರ್ಷಣ,

ಪದ್ಮದಲ್ಲಿ- ಜಯಾಪತಿ ದ್ಯುಲ್ಕ, ಪ್ರಸ್ತಾವ ವಾಸುದೇವ,

ನಾರಾಯಣ ಮುದ್ರೆಯಲ್ಲಿ- ಜಯಂತೀಪತಿ ಸಹಸ್ರೋಲ್ಕ,

ಉದ್ಗೀಥ ನಾರಾಯಣ.

ಸಂಧ್ಯಾವಂದನೆ ಮಾಡುವಾಗ- ಶ್ರೀರಾಮ; ಹೋಮಮಾಡುವಾಗ- ಪರಶುರಾಮ ಪೂಜಾಕಾಲದಲ್ಲಿ ಶಾಲಿಗ್ರಾಮದಲ್ಲಿ- ವಾಸುದೇವ ; ಲೋಹದ ಪ್ರತಿಮೆಯಲ್ಲಿ - ಪರಶುರಾಮ; ಕಲ್ಲಿನ ಪ್ರತಿಮೆಯಲ್ಲಿ ಟಂಕೀ; ಪೂಜೆಗೋಸ್ಕರ ಹೂವನ್ನು ಬಿಡಿಸುವಾಗ ಕೃಷ್ಣ; ತುಲಸಿಯನ್ನು ಬಿಡಿಸುವಾಗ- ರಾಮ; ದರ್ಭೆಗಳನ್ನು ಕತ್ತರಿಸುವಾಗ ಕಪಿಲ; ಮಂಗಳಾರತಿ ತೆಗೆದುಕೊಳ್ಳುವಾಗ- ಪರಶುರಾಮ; ನಿರ್ಮಾಲ್ಯತೀರ್ಥದಲ್ಲಿ ವಿಶ್ವ, ತೈಜಸ, ಪ್ರಾಜ್ಞ; ಪ್ರೋಕ್ಷಣೆಗೆ- ತುರ್ಯ; ಮಹಾತೀರ್ಥದಲ್ಲಿ- ರಾಮ, ಕೃಷ್ಣ ವಾಸುದೇವ ; ಶಂಖತೀರ್ಥದಲ್ಲಿ- ಮುಕುಂದ; ತೀರ್ಥಪ್ರೋಕ್ಷಣೆಗೆ- ಅನಿರುದ್ಧ ತೀರ್ಥದಲ್ಲಿ ಸೇವಿಸುವ ಮೂರು ತುಳಸೀದಳಗಳಲ್ಲಿ- ಜಯಾ, ಮಾಯಾ, ಲಕ್ಷ್ಮೀ ಎಂಬ ರಮಾರೂಪಗಳು (ತತ್ಪತಿಗಳಾದ ಸಂಕರ್ಷಣ, ವಾಸುದೇವ, ನಾರಾಯಣ- ರನ್ನೂ ಚಿಂತಿಸಬೇಕು).

ಪ್ರದಕ್ಷಿಣೆ ಮಾಡುವಾಗ ಗರುಡಗಮನ, ನಮಸ್ಕಾರ ಮಾಡುವಾಗ ಶೇಷಶಾಯಿ.

ನೈವೇದ್ಯಕಾಲದಲ್ಲಿ ಕೇಶವಾದಿ ಚತುರ್ವಿಂಶತಿಮೂರ್ತಿಗಳ ಸ್ಮರಣೆಯ ಕ್ರಮವನ್ನು "ನೈವೇದ್ಯಪ್ರಕರಣಸಂಧಿ" ಯಲ್ಲಿ ನೋಡಿ ತಿಳಿದುಕೊಳ್ಳಿರಿ. ಸಂಕ್ಷೇಪವಾಗಿ

ಪಂಚಮೂರ್ತಿಗಳ ಸ್ಮರಣೆ ಹೀಗಿದೆ. - ಅನ್ನದಲ್ಲಿ ವಾಸುದೇವ, ಪರಮಾನ್ನದಲ್ಲಿ ಪ್ರದ್ಯುಮ್ನ, ಭಕ್ಷ್ಯದಲ್ಲಿ ಸಂಕರ್ಷಣ, ತುಪ್ಪದಲ್ಲಿ ಅನಿರುದ್ಧ, ತೊವ್ವೆಯಲ್ಲಿ ಗರುಡಾ-ರೂಢ, ಶಾಕಗಳಲ್ಲಿ ಉಪೇಂದ್ರ, ಸರ್ವತ್ರದಲ್ಲಿ ಮೂಲೇಶ ನಾರಾಯಣ, ಹಾಲಿನಲ್ಲಿ ವಿಷ್ಣು, ಮೊಸರಿನಲ್ಲಿ ವಾಮನ, ಬೆಣ್ಣೆಯಲ್ಲಿ ತ್ರಿವಿಕ್ರಮ, ಹಣ್ಣಿನಲ್ಲಿ ಉಪೇಂದ್ರ, ತಾಂಬೂಲದಲ್ಲಿ ಹರಿ, ಸ್ವಾದೂದಕದಲ್ಲಿ ಕೃಷ್ಣ, ಭೋಜನಕಾಲದಲ್ಲಿ ಜನಾರ್ದನ, ಪೂರ್ವೋತ್ತರ ಆಪೋಶನಕಾಲದಲ್ಲಿ ಶ್ರೀಹರಿ, , ಭಕ್ಷ್ಯಕಾಲದಲ್ಲಿ ಅಚ್ಯುತ, ಪರ-ಮಾನ್ನವನ್ನು ಉಣ್ಣುವಾಗ ಪಾಂಡುರಂಗ, ಮೊಸರನ್ನದಲ್ಲಿ ಶ್ರೀನಿವಾಸ.

ಬಾಯಿಮುಕ್ಕಳಿಸುವಾಗ- ಮಾಧವ.

ಪುರಾಣಶ್ರವಣಮಾಡುವಾಗ- ವ್ಯಾಸ, ಕೃಷ್ಣ ಹಯಗ್ರೀವರೂಪಗಳು.

ಓಡಾಡುವಾಗ ವಾಮನ, ಬೆಟ್ಟದಲ್ಲಿ ರಘುನಂದನ, ನೀರಿನ ಮಧ್ಯೆ ವರಾಹ, ಅಗ್ನಿಯ ಮಧ್ಯೆ ಜಲಶಾಯಿ, ಮಲಗುವಾಗ ಪದ್ಮನಾಭ, ಸ್ತ್ರೀಸಂಗಮದಲ್ಲಿ ಶ್ರೀಧರ, ಮಕ್ಕಳನ್ನು ಆಡಿಸುವಾಗ ಬಾಲಕೃಷ್ಣ, ಪತ್ನಿಯಲ್ಲಿ ಮಾಧವ, ಔಷಧದಲ್ಲಿ ವಿಷ್ಣು, ಸರ್ವಕಾರ್ಯಗಳಲ್ಲಿ ಮಾಧವ.

ಲೇಖನ 7- ದೊಡ್ಡವರ ಸೇವೆಯನ್ನು ಮಾಡಿರಿ

ಮಹಾತ್ಮರ ಸಂಗವು ದೊರೆಯುವುದು ದುರ್ಲಭ. ದೊರೆತಾಗ ಕೈಲಾದಷ್ಟು ಅವರ ಸೇವೆಯನ್ನು ಮಾಡಬೇಕು. ಮಹಾತ್ಮರ ಸೇವೆಯು ಮುಕ್ತಿಗೆ ದ್ವಾರವೆನಿಸುತ್ತದೆ. ಮಹಾತ್ಮರ ಪಾದಧೂಳಿಯ ಅಭಿಷೇಕವಾಗದೇ ಸರಿಯಾದ ಜ್ಞಾನವು ಹುಟ್ಟುವುದಿಲ್ಲ.

ನಾರದರು ಹಿಂದೆ ಶೂದ್ರಬಾಲಕರಾಗಿದ್ದು ಚಾತುರ್ಮಾಸ್ಯಕ್ಕಾಗಿ ಬಂದಿರುವ ಯತಿಗಳ ಸೇವೆಯಿಂದ ತತ್ತ್ವಜ್ಞಾನವನ್ನು ಪಡೆದು, ಈಗ ಬ್ರಹ್ಮಪುತ್ರರಾಗಿ ನಾರದ-ರಾಗಿದ್ದಾರೆ.

ಮಹಾತ್ಮರು ತಮ್ಮ ಸಂಗದಿಂದ ತೀರ್ಥಗಳನ್ನೇ ತೀರ್ಥೀಕರಿಸುತ್ತಾರೆ. ಮಹಾತ್ಮರ ದರ್ಶನವೂ ಒಂದು ಸೇವೆಯೇ ಆಗುತ್ತದೆ. ಗಂಗಾದಿ ನದಿಗಳಲ್ಲಿ ಮಿಂದರೆ, ಪ್ರತಿಮೆಗಳನ್ನು ಪೂಜಿಸಿದರೆ ಅಷ್ಟು ಬೇಗ ಶುದ್ಧರಾಗುವುದಿಲ್ಲ. ಆ ತೀರ್ಥದೇವತೆ-

ಗಳೂ, ಪ್ರತಿಮಾಧಿಷ್ಠಿತ ದೇವತೆಗಳೂ ಸಹ ದೊಡ್ಡವರ ಸಂಗವನ್ನು ಒದಗಿಸಿಕೊಟ್ಟು ಆ ಮೂಲಕವೇ ಶುದ್ಧಿಗೊಳಿಸತಕ್ಕವರು. ಆದರೆ ದೊಡ್ಡವರು ದರ್ಶನಮಾತ್ರದಿಂದಲೇ ನಮ್ಮನ್ನು ಪುನೀತರನ್ನಾಗಿ ಮಾಡುತ್ತಾರೆ.

ಜ್ಞಾನಿಗಳಾದ ಮಹಾತ್ಮರು ನಮಗೆ ಎಂದು ಸಿಗುವರೋ ಗೊತ್ತಿಲ್ಲ. ಈಗಂತೂ ನಮ್ಮ ಸ್ವಂತ ಗುರುಹಿರಿಯರು ಸಿಕ್ಕಿದ್ದಾರೆ. ಅವರ ಸೇವೆಯನ್ನು ಮಾಡೋಣ. ಇದು ಮುಂದೆ ಸ್ವಯೋಗ್ಯ ಗುರುಗಳ ಪ್ರಾಪ್ತಿಗೆ ಕಾರಣವಾಗುತ್ತದೆ.

ಮಕ್ಕಳಿಗೆ ತಂದೆ ತಾಯಿಗಳಲ್ಲಿ, ಶಿಷ್ಯರಿಗೆ ಗುರುಗಳಲ್ಲಿ, ಹೆಂಡತಿಯರಿಗೆ ಗಂಡನಲ್ಲಿ, ಭಗವಂತನು ಸನ್ನಿಹಿತನಾಗಿದ್ದು ಅನುಗ್ರಹಮಾಡಲು ಕಾದಿರುತ್ತಾನೆ. ಆ ಅಧಿಷ್ಠಾನದಲ್ಲಿ ಸೇವೆಯನ್ನು ಮಾಡಿದಾಗ ಬೇಗ ಒಲಿಯುತ್ತಾನೆ. ಮಕ್ಕಳು ತಂದೆ ತಾಯಿಗಳ ಸೇವೆಯನ್ನೂ, ಶಿಷ್ಯರು ಗುರುಗಳ ಸೇವೆಯನ್ನೂ, ಪತ್ನಿಯರು ಪತಿಗಳ ಸೇವೆಯನ್ನೂ ಬಿಟ್ಟು ಯಾವುದೋ ವ್ರತ ಉಪವಾಸಗಳ ಮೂಲಕ ದೇವರನ್ನು ಒಲಿಸಲು ಪ್ರಯತ್ನಿಸಿದರೆ, ನಾವೆಯನ್ನು ಬಿಟ್ಟು ನಾಯಿಯ ಬಾಲವನ್ನು ಹಿಡಿದು ನದಿಯನ್ನು ದಾಟಲು ಪ್ರಯತ್ನಿಸಿದಂತೆ.

ರಾಜನು ಹಳ್ಳಿ ಹಳ್ಳಿಗಳಿಗೆ ಆ ಹಳ್ಳಿಗರ ಕ್ಷೇಮವಿಚಾರಣೆಗೆ ಭೇಟಿ ಕೊಡುತ್ತಾನೆ. ನಮ್ಮ ಹಳ್ಳಿಗೆ ಬಂದಾಗ ನಮ್ಮ ಕುಂದು ಕೊರತೆಗಳನ್ನು ಹೇಗೆ ಹೇಳಿಕೊಳ್ಳಬೇಕೋ, ಅದರಂತೆ ದೇವರು ನಮನಮಗೆ ಅನುಗ್ರಹಮಾಡಲು ನಮ್ಮ ನಮ್ಮ ಗುರುಹಿರಿಯ-ರಲ್ಲಿ ಸನ್ನಿಹಿತನಾಗಿರುತ್ತಾನೆ. ನಾವು ಅವರಲ್ಲಿ ದೇವರನ್ನು ಆರಾಧಿಸಿ ಅನುಗ್ರಹವನ್ನು ಪಡೆಯಬೇಕು.

ಶ್ರೀಮದಾಚಾರ್ಯರ ಶಿಷ್ಯರುಗಳು ಗುರುಗಳು ಏಳುವುದಕ್ಕಿಂತ ಮುಂಚೆ ಎದ್ದು ಅರ್ಧರಾತ್ರಿಯವರೆಗೂ ಬಹುಮಾನಪೂರ್ವಕವಾಗಿ ಗುರುಗಳ ಸೇವೆಯನ್ನು ಮಾಡುತ್ತಿದ್ದರು. ಹಾಗೆ ಮಾಡದಿದ್ದರೆ ಸದ್ಗತಿಯು ಹೇಗಾದೀತು ಎನ್ನುತ್ತಾರೆ ಪಂಡಿತಾಚಾರ್ಯರು.

ಆದ್ದರಿಂದ ದೊಡ್ಡವರ ಸೇವೆಯ ಕಡೆಗೆ ಜಾಗ್ರತೆಯಿರಲಿ.

॥ ಇತಿ ಶಮ್ ॥

ಲೇಖನ -8 ದೊಡ್ಡವರನ್ನು ನಿಂದಿಸಬೇಡಿ

ದೊಡ್ಡವರ ಸೇವೆಯು ಎಷ್ಟು ಮುಖ್ಯವೋ ದೊಡ್ಡವರ ನಿಂದೆಯನ್ನು ಬಿಡುವುದೂ ಅಷ್ಟೇ ಮುಖ್ಯ. ನಾವು ಎಲ್ಲಾ ಮಹಾತ್ಮರ ಸೇವೆಯನ್ನು ಮಾಡಲು ಸಾಧ್ಯವಿಲ್ಲ, ಒಬ್ಬ ಮಹಾತ್ಮರು ನಮ್ಮ ಸೇವೆಗೆ ಸಿಗುವುದೂ ಕಷ್ಟವಾಗಬಹುದು. ಆದರೆ, ಒಬ್ಬ ಮಹಾತ್ಮರ ನಿಂದೆಯನ್ನೂ ಮಾಡದಂತೆ ಎಚ್ಚರವಾಗಿರಬೇಕು. ತಮಗಿಂತ ಮಹಾತ್ಮರ ಅವಜ್ಞೆ(ತಿರಸ್ಕಾರ)ದಿಂದ ರುದ್ರದೇವರೂ ಸುಟ್ಟು ಬೂದಿಯಾದಾರು ಎನ್ನುತ್ತಾರೆ ಶ್ರೀಮದಾಚಾರ್ಯರು. ದಕ್ಷಪ್ರಜಾಪತಿಗಳು ರುದ್ರದೇವರನ್ನು ನಿಂದಿಸಿ-ದ್ದರಿಂದ ಅವರ ಯಜ್ಞವು ಭಂಗವಾದದ್ದು ಮಾತ್ರವಲ್ಲ, ಅವರ ಶಿರಸ್ಸೇ ಹೋಯಿತು. ರುದ್ರದೇವರ ಅನುಗ್ರಹದಿಂದ ಅವರು ಹೋತದ ತಲೆಯೊಂದಿಗೆ ಬದುಕಿ ಯಜ್ಞವನ್ನು ಪೂರೈಸಿದರೂ ಸಹ, ಪ್ರಚೇತಸರ ಮಗನಾಗಿ ಮತ್ತೆ ಭೂಮಿಯಲ್ಲಿ ಹುಟ್ಟಬೇಕಾಯಿತು.

ರಹೂಗಣಮಹಾರಾಜರು ಜಡಭರತರನ್ನು ತಿಳಿಯದೇ ಅವಹೇಳನ ಮಾಡಿದ್ದಕ್ಕೆ ಹೆದರಿ "ನಾನು ಇಂದ್ರದೇವರ ವಜ್ರಾಯುಧಕ್ಕಾಗಲೀ, ಮಹದೇವರ ತ್ರಿಶೂಲಕ್ಕಾಗಲೀ, ವರುಣಕುಬೇರಾದಿಗಳ ಅಸ್ತ್ರಕ್ಕಾಗಲೀ ಹೆದರುವುದಿಲ್ಲ ; ಬ್ರಾಹ್ಮಣಕುಲಕ್ಕೆ ಅವಮಾನಮಾಡಿದ್ದಕ್ಕೆ ಹೆದರುತ್ತೇನೆ" ಎನ್ನುತ್ತಾರೆ. ಇದರಿಂದ ತಿಳಿಯದೇ ದೊಡ್ಡವರ ಅವಮಾನ ಮಾಡಿದರೂ ಹಾನಿ ಎಂದು ಗೊತ್ತಾಗುತ್ತದೆ.

ನಾರದರು ಹಿಂದೆ ಉಪಬರ್ಹಣ ಎಂಬ ಗಂಧರ್ವರಾಗಿದ್ದು ದೇವಸತ್ರದಲ್ಲಿ ಗಾನಮಾಡಲು ಕರೆದಾಗ ಸ್ತ್ರೀಪರಿವಾರಸಮೇತವಾಗಿ ಹೋಗಿ ಗಾನಮಾಡಿ ದೇವಹೇಳನಮಾಡಿದ್ದರಿಂದ ಶೂದ್ರರಾಗಿ ಹುಟ್ಟಬೇಕಾಯಿತೆಂದು ತಾವೇ ಹೇಳಿಕೊಂಡಿರುತ್ತಾರೆ.

ವಿರೂಪರಾದ ಅಂಗೀರಸರನ್ನು ಹಾಸ್ಯ ಮಾಡಿದ್ದರಿಂದ ಸುದರ್ಶನನೆಂಬ ವಿದ್ಯಾಧರನು ಹೆಬ್ಬಾವಾಗಿ ಬೀಳಬೇಕಾಯಿತು. ಇದೇ ಕಾರಣದಿಂದ ಮರೀಚಿಋಷಿಗಳ ಆರು ಮಕ್ಕಳು ಕಾಲನೇಮಿಯ ಮಕ್ಕಳಾಗಿ ಅಸುರ ಯೋನಿಯಲ್ಲಿ ಹುಟ್ಟಬೇಕಾಯಿತು.

ಕುಬೇರನ ಮಕ್ಕಳಾದ ನಲಕೂಬರಮಣಿಗ್ರೀವರು ನಾರದರ ಎದುರಿನಲ್ಲಿ

ದಿಗಂಬರರಾಗಿ ಅಸಭ್ಯವರ್ತನೆ ಮಾಡಿದ್ದರಿಂದ ಅರ್ಜುನವೃಕ್ಷಗಳಾಗಿ ಹುಟ್ಟ-ಬೇಕಾಯಿತು.

ಪಾಂಡುರಾಜರು ತಿಳಿಯದೇ ಜಿಂಕೆಯ ರೂಪದಲ್ಲಿದ್ದ ಕಿಂದಮರನ್ನು ಕೊಂದಕಾರಣ ಸ್ತ್ರೀಸಂಗಮಸುಖವನ್ನೇ ಬಿಡಬೇಕಾಯಿತು. ದಶರಥಮಹಾರಾಜರು ತಿಳಿಯದೇ ಮುನಿಕುಮಾರನಾದ ಶ್ರವಣನನ್ನು ನೀರುತುಂಬುತ್ತಿರುವಾಗ ಆನೆಯೆಂಬ ಭ್ರಾಂತಿಯಿಂದ ಶಬ್ದವೇಧಿಯಿಂದ ಸಂಹರಿಸಿದ ಕಾರಣ ತಮ್ಮ ಮರಣ ಕಾಲದಲ್ಲಿ ಯಾವ ಮಕ್ಕಳೂ ಹತ್ತಿರವಿಲ್ಲದಂತೆ ಆಯಿತು.

ಹೀಗೆ ಅನೇಕ ನಿದರ್ಶನಗಳಿಂದ ತಿಳಿದು ಬರುವುದೇನೆಂದರೆ, ಗೊತ್ತಿದ್ದೋ ಗೊತ್ತಿಲ್ಲದೆಯೋ ದೊಡ್ಡವರಿಗೆ ಅಪರಾಧಮಾಡಿದರೂ ಹಾನಿಕರ. ಕಂಡು ಮುಟ್ಟಿದರೂ ಸರಿ, ಕಾಣದೇ ಮುಟ್ಟಿದರೂ ಸರಿ ಕೆಂಡವು ಸುಡುತ್ತದೆ ಅಲ್ಲವೇ ?

ಆದ್ದರಿಂದ ನಾವು ಯಾರಿಗೂ ಅವಮಾನವಾಗುವಂತೆ ವರ್ತಿಸಬಾರದು. ಯಾರನ್ನೂ ನೋಡಿದರೂ ಅವರು ನನಗಿಂತ ಕಡಿಮೆ ಎಂಬ ಭಾವನೆ ಮಾಡದೇ, ನಮಗಿಂತ ಉತ್ತಮರು ಯಾಕೆ ಆಗಿರಬಾರದು ಎಂಬ ಚಿಂತನೆಯು ಇರಲಿ. ಇದರಿಂದ ಅನೇಕ ಹಾನಿಗಳು ತಪ್ಪುತ್ತವೆ. ಉದಾಹರಣೆಗೆ ಒಂದು ನಾಯಿಯನ್ನು ನಾವು ನಾಯಿಯೆಂಬ ಬುದ್ಧಿಯಿಂದ ಕಲ್ಲು ಹೊಡೆದರೆ, ಅದು ಅಕಸ್ಮಾತ್ತಾಗಿ ಯಾವುದೋ ಋಷಿಯಾಗಿದ್ದರೆ ಋಷಿಯನ್ನು ಹೊಡೆದಂತೆ ಆಗುವುದಿಲ್ಲವೇ ? ಋಷಿಯು ನಾಯಿಯಾಗಿರುತ್ತಾನೆಯೇ ಎಂದು ಕೇಳಬೇಡಿ. ಒಮ್ಮೆ ವಿಶ್ವಾಮಿತ್ರರಂತಹ ಬ್ರಹ್ಮರ್ಷಿಗಳು ನಾಯಿಯ ರೂಪವನ್ನು ತೆಗೆದುಕೊಂಡಿದ್ದರು. ಆದ್ದರಿಂದ ನಾವು ಯಾರನ್ನೂ ಅವಹೇಳನ ಮಾಡಬಾರದು. ನಮಗಿಂತ ವಯಸ್ಸಿನಿಂದಲೋ, ಬಾಂಧವ್ಯದಿಂದಲೋ, ಆಶ್ರಮದಿಂದಲೋ, ವಿದ್ಯೆಯಿಂದಲೋ ಉತ್ತಮರಾದ-ವರನ್ನು ಉಚಿತವಾಗಿ ಗೌರವಿಸಲೇ ಬೇಕು. ಈ ವಿಷಯದಲ್ಲಿ ಹೆಚ್ಚು ಮಾಹಿತಿಗಾಗಿ 'ಪೀಠಾಧಿಪತಿಗಳು ನಿಂದಾರ್ಹರೇ ?' ಎಂಬ ನಮ್ಮ ಲೇಖನವನ್ನು ನೋಡಿರಿ.

|| ಇತಿ ಶಮ್ || ಶ್ರೀಕೃಷ್ಣಾರ್ಪಣಮಸ್ತು ||

ದೇವರ ನಾಮಗಳು

॥ ಶ್ರೀ ಗುರುಭ್ಯೋನಮಃ । ಹರಿಃ ।ಓಂ ॥

ಹರಿ ಸರ್ವೋತ್ತಮನೆನ್ನು ಅದುವೆ ವಾಯುಗೆ ಪ್ರೀತಿ ।
ವಾಯು ಜೀವೋತ್ತಮನೆನ್ನು ಅದುವೆ ಹರಿಗೆ ಪ್ರೀತಿ ।
ಹರಿಸರ್ವೋತ್ತಮ ವಾಯುಜೀವೋತ್ತಮ ನೆನ್ನುತ ।
ನೋಯದೆ **ಪ್ರೀತಜಗನ್ನಾಥವಿಠಲನ**ಪೊಂದು ॥

ರಾಗ: ಮಧ್ಯಮಾವತಿ ತಾಳ- ಝಂಪೆ

ಕಿಲುಬು ಮಾನವ ನಾನೆಂದರಿದೆನೋ ದೇವ ॥ಪ॥
ಹಲುಬುವುದ ಕಂಡು ನೀ ಕನಿಕರಿಸದಿರುವರೆ ॥ಅ.ಪ ॥

ನಿನ್ನ ಮಹಿಮಯ ಕೇಳಿ ಹಿಗ್ಗುವಂಥಹ ಹಲುಬು ।
ನಿನ್ನ ಮಹಿಮೆಯ ಪಾಡಿ ಪೊಗಳುವ ಹಲುಬು ।
ನಿನ್ನ ನಾಮೋಚ್ಚರಿಸಿ ರೋಮಾಂಚಿಸುವ ಹಲುಬು ।
ನಿನ್ನವರ ದಯವಿಲ್ಲ ದಿದ್ದರೆಲ್ಲವು ಕಿಲುಬು ॥ 1 ॥
ನಿನ್ನ ನೆನೆಯುತ ತನುವ ಮರೆದು ಮೆರೆಯುವ ಹಲುಬು ।
ನಿನ್ನ ವ್ಯಾಪಾರಗಳ ತಿಳಿವಂಥ ಹಲುಬು ।
ನಿನ್ನ ರೂಪವ ಕಂಗಳಿಂದ ಕಾಂಬುವ ಹಲುಬು ।
ನಿನ್ನವರ ದಯವಿಲ್ಲದಿಲ್ಲದೆಲ್ಲವು ಕಿಲುಬು ॥ 2 ॥
ನಿನ್ನವರ ಜೊತೆಮಾಡು ಎನ್ನಲ್ಲಿ ದಯಮಾಡು ।
ಘನ್ನಮಹಿಮನೆ ಕರುಣದೆನ್ನ ನೀ ನೋಡು ।
ಉನ್ನತಾದ್ರಿನಿವಾಸ ದುರಿತಗಳನೀಡಾಡು ।
ಪ್ರೀತ ಜಗನ್ನಾಥ ವಿಠಲ ಎನ್ನ ಮುಂದಾಡು ॥ 3 ॥

ರಾಗ- ವಾಸಂತಿ ತಾಳ -ಆದಿ

ಹರಿಯನು ಬಿಟ್ಟರೆ ಗತಿಯಿಲ್ಲ॥ಪ॥
ಮಾರುತಿ ಮತ ಬಿಟ್ಟರೆ ಮತಿಯಿಲ್ಲ॥ಅ.ಪ ॥

ಪತಿಯನು ಬಿಟ್ಟರೆ ಸತಿಯಲ್ಲ। ತಾ
ಮಾತೆಯ ಬಿಟ್ಟರೆ ಮಗನಲ್ಲ॥
ನೀತಿಯ ಬಿಡೆ ಮಾನವನಲ್ಲ॥ ಆಪ
ಖ್ಯಾತಿಯಿಂದ ಬೇರೆ ಮೃತಿಯಿಲ್ಲ ॥ 1 ॥
ತ್ರಿಪದಿಯ ಬಿಟ್ಟರೆ ದ್ವಿಜನಲ್ಲ। ತಾ
ಭೂಪತಿ ಬಿಡೆ ಕ್ಷತ್ರಿಯನಲ್ಲ॥
ವ್ಯಾಪಾರಾದಿಯ ಬಿಡಲು ವಿಡಲ್ಲ।
ತಾ ಪದಬಿಟ್ಟರೆ ಪಾದಜನಲ್ಲ ॥ 2 ॥
ಜ್ಞಾನವ ಬಿಟ್ಟರೆ ಮುಕ್ತಿಲ್ಲ। ಹರಿ
ಗಾನವ ಬಿಟ್ಟರೆ ಸುಖವಿಲ್ಲ।
ದೀನರಕ್ಷಕ **ಪ್ರೀತ ಜಗನ್ನಾಥ** ।
ವಿಠಲನ ಬಿಟ್ಟರೆ ದೇವ ತಾನಿಲ್ಲ ॥ 3 ॥

ರಾಗ- ಸಿಂಧುಭೈರವಿ ತಾಳ- ಝಂಪೆ

ಕೈಮುಗಿದು ಬೇಡುವೆನು ಅಪರಾಧಕ್ಷಮಿಸಯ್ಯ ॥ಪ ॥
ಮಾಮನೋಹರ ಕೃಷ್ಣ ಹರಿ ಆದಿ ಪುರುಷ॥ಅ .ಪ ॥

ಪರವನಿತೆಯ ಪಾಪ ಪರವಿತ್ತದ ಪಾಪ।
ಪರನಿಂದೆಯ ಪಾಪ ಪರಪಾಪವು ॥
ಹರಿಯೆ ಹಗಲಿರುಳೆನದೆ ಮಾಡ್ದೆ ಪರಿ ಪರಿ ಪಾಪ।
ಪರಿಹರಿಸಬೇಕಯ್ಯ ಸರುವೇಶ ಕೃಷ್ಣ ॥ 1 ॥
ಹರಿದಿನದಲುಂಡಂಥ ಘೋರಪಾಪವು ಮತ್ತೆ।

ಹರಿದಿನದಿ ನಿದ್ರೆಯನು ಮಾಡಿದ ಪಾಪ ||
ಗುರುನಿಂದೆಯನು ಪರಮ ಹರುಷದಲಿ ಕೇಳಿದ |
ಪರಮ ಪಾಪವ ತರಿಯೊ ಗುರುವರದ ದೇವ || 2 ||
ಮಲಿನಮನದಲಿ ನಿನ್ನನರ್ಚಿಸಿದ ಮಹಪಾಪ |
ಮಲಮೂತ್ರರೋಧದಲಿ ಅರ್ಚಿಸಿದ ಪಾಪ ||
ಹಲವು ಮಾತೇಕೆ ಹೇ ನಳಿನಾಕ್ಷ ಕಮಲೇಶ |
ಕಲಿಬಾಧೆಯಲಿ ಮಾಡ್ದ ಮಹಪಾಪ ಉಪಪಾಪ || 3 ||
ಒಂದೊಂದು ಅಪರಾಧವೆಂದು ವಂದಿಸಲೇನು |
ಹಿಂದು ಮುಂದೂ ಎಂದು ವೃಂದ ವೃಂದ ||
ಸಂದೇಹವಿಲ್ಲದಲೆ ಮಂದಬುದ್ಧಿಲಿ ಮಾಡಿ |
ತಂದೆ ಎನ್ನಯ ಸಮರಿನ್ನಿಲ್ಲೆಂದು ಕೊಂಡೆ || 4 ||
ಹೊತ್ತು ಮೀರಿದ ಮೇಲೆ ಹಾಸಿಗೆಯ ಮೇಲೆ ನಾ |
ಕತ್ತೆಯಂದದಿ ಮರಳಿ ಹೊರಳಿ ಚೆನ್ನಾಗಿ ||
ಹೊತ್ತು ಹೊತ್ತಿಗೆ ಸ್ನಾನ ಸಂಧ್ಯಾನಗಳ ಬಿಟ್ಟು |
ಕೃತ್ಯ ಮರೆತೆನೆ **ಪ್ರೀತ ಜಗನ್ನಾಥ ವಿಠಲ** ||5||

ರಾಗ- ಕಾಂಭೋಜಿ ತಾಳ- ಝಂಪೆ

ಏಕಾದಶೇಂದ್ರಿಯದ ವಿತರಣೆಯು ಹೀಗಾಯ್ತು |
ಏಕಾದಶೀಪ್ರಿಯನೆ ನಾಕಜನವಂದ್ಯ ||ಪ||

ಆವ ಮನಸಿಲಿ ನಿನ್ನ ಧ್ಯಾನವನು ಮಾಡುವುದೋ |
ಆವ ಮನಸಿಲಿ ನಿನ್ನ ಕಥೆ ಮನನವೋ |
ದೇವ ಆ ಮನಸಿನಲಿ ಪರವನಿತೆ ಪರವಿತ್ತ |
ದಿವಸದಿವಸದಿ ಚಿಂತಿಸುತ ಕೆಟ್ಟೆನಯ್ಯ || 1 ||
ಆವ ಶ್ರೋತ್ರದಿ ನಿನ್ನ ಕಥೆಯೆಂಬ ಸುಧೆಯನ್ನು |

ಸವಿಯುವುದೊ ದಿನದಿನವು ನಿನ್ನವನು ಎನಿಸಿ ॥
ದೇವ ಆ ಶ್ರೋತ್ರದಲಿ ಲೋಕವಾರ್ತೆಯ ಕೇಳಿ।
ಭವಕೂಪದಲಿ ಬಿದ್ದು ಮರುಳಾದೆನಯ್ಯ ॥ 2 ॥
ಆವ ಸ್ಪರ್ಶೇಂದ್ರಿಯವು ನಿನ್ನ ಭಕುತರ ಮಾನ್ಯ ।
ದಿವ್ಯ ಆಶ್ಲೇಷದಲಿ ಹರ್ಷಿಸುವುದೋ ॥
ದೇವ ಆ ಇಂದ್ರಿಯವು ಕುಸುಮಗಂಧಿಯನೋಡಿ ।
ಶ್ರೀವರನೆ ಇಚ್ಛಿಸಲು ಆವಗತಿಯಯ್ಯ ॥ 3 ॥
ಆವ ಕಣ್ಣಿಲಿ ನಿನ್ನ ರೂಪವನು ನೋಡುವುದೊ ।
ಶ್ರೀವಾಯುವಿನ ಶಾಸ್ತ್ರದರುಶನವೊ ಮತ್ತೆ ॥
ದೇವ ಆ ಕಣ್ಣಿನಲಿ ನವಮೋಹನಾಂಗಿಯರ ।
ಎವೆಯಿಕ್ಕದಲೆ ನೋಡೆ ಜವನು ತಾ ಬಿಡುವನೆ ॥ 4 ॥
ಆವ ನಾಸಿಕ ನಿನ್ನ ನಿರ್ಮಾಲ್ಯವನು ನಿತ್ಯ ।
ಹೇ ವಾಮನನೆ ಆಘ್ರಾಣಮಾಡುವುದೋ ।
ದೇವ ಆ ನಾಸಿಕವು ಅನ್ಯಾರ್ಪಿತಪುಷ್ಪ ।
ದಾವಗಂಧವನಿಚ್ಛೆಮಾಡುತಿದೆ ನೋಡು ॥ 5 ॥
ಆವ ಜಿಹ್ವೆಯು ನಿನ್ನ ನೈವೇದ್ಯ ಸವಿಯುತಲಿ ।
ಶ್ರೀವರನು ಉಂಡುಣಿಪನೆಂದು ತಿಳಿಯುತಲಿ ।
ದೇವ ತಾನಿರದ್ದಾಂಗೆ ಬಗೆ ಬಗೆಯ ಅನ್ನವನು।
ಕಾವ ದೇವನ ಮರೆತು ಇಚ್ಛಿಸಿತೊ ಸ್ವಾಮಿ ॥ 6 ॥
ಆವ ವಾಗಿಂದ್ರಿಯದಿ ನಿನ್ನ ನಾಮವ ನುಡಿದು ।
ತಾವಕರು ನಿನ್ನ ದಯೆಯನ್ನು ಪೊಂದಿದರೋ ॥
ದೇವ ಆ ವಾಕ್ಕು ಸದಾಕಾಲದಲಿ ಲೋಕದಾ ।
ದುರ್ವಾರ್ತೆಯನು ಆಡಿ ಪರರ ನಿಂದಿಸಿತೋ ॥ 7 ॥
ಆವ ಕರಗಳು ನಿನ್ನ ಪೂಜೆಯನು ಮಾಡುವುದೊ ।

ಆವ ಕರಗಳು ನಿನ್ನವರನು ಸೇವಿಪುದೊ ॥
ದೇವ ಆ ಕರದಲ್ಲಿ ದುಷ್ಕರ್ಮಗಳಮಾಡಿ ।
ಮಧ್ವಗ್ರಂಥವನನಿಶ ಬರೆಯಲಿಲ್ಲೋ ಕೃಷ್ಣ ॥ 8 ॥
ಆವ ಪಾದವು ನಿನ್ನ ಆಲಯಕೆ ಪೋಗುವುದೋ ।
ಕೈವಲ್ಯಪದದಾತ ನರ್ತಿಸುವುದೋ ॥
ದೇವ ಆ ಪಾದದಲಿ ದುಷ್ಟಪಥ ಮೆಟ್ಟುತಲಿ ।
ಜವನಲೋಕದಿ ಕೆಂಡಮಾರ್ಗದಲಿನಡೆದೆ ॥ 9 ॥
ಪಾಯು ಉಪಸ್ಥಗಳ ಜಯವಿಲ್ಲದಂತಾಯ್ತು ।
ಭಯನಿವಾರಣ ನಿನ್ನ ಒಲುಮೆ ದೂರಾಯ್ತು ॥
ಪ್ರಿಯ ನಿನ್ನ ಬಿಟ್ಟು ನಾನನ್ಯರಲಿ ಪ್ರೀತಿಯನು ।
ಸಂಯೋಜನೆಯಮಾಡಿ ನರಕದಲಿ ಬಿದ್ದೆ ॥ 10 ॥
ಮಾಕಳತ್ರನೆ ಎನ್ನ ಮನಸುನಿನ್ನಲಿ ನಿಲಿಸು ।
ಲೋಕೇಶ ಇಂದ್ರಿಯದ ಜಯ ಪಾಲಿಸು ॥
ಸ್ವೀಕರಿಸು ಎನ್ನ ತವ ಕೂಸು ಒಂದೆಂದೆನಿಸು ।
ನಾಕೀಶ **ಪ್ರೀತ ಜಗನ್ನಾಥ ವಿಠ್ಠಲ** ಅರಸು ॥ 11 ॥

ರಾಗ- ಚಕ್ರವಾಕ ತಾಳ- ಆದಿ

ಮೂರ್ಖತನ । ಇದು । ಮೂರ್ಖತನ ॥ಪ॥
ಮೂರ್ಖರೊಳಗೆ ಅತಿ । ಮೂರ್ಖನು ಎನಿಪುದು ॥ಅ.ಪ॥
ಸತ್ತವಗಳುವುದು ಮೂರ್ಖತನ ।
ಹೆತ್ತೆ ನಾನೆಂಬುದು ಮೂರ್ಖತನ ॥
ಪುತ್ರ ಗತಿದನೆಂದು ಮೂರ್ಖತನ । ನಾ
ಭೃತ್ಯನಲ್ಲೆಂಬುದು ಮೂರ್ಖತನ ॥ 1 ॥
ಕರ್ತೃನಾನೆಂಬುದು ಮೂರ್ಖತನ । ಹರಿ
ಕರ್ತೃತ್ವ ವಿಸ್ಮೃತಿ ಮೂರ್ಖತನ ॥

ಮಿತ್ರತ್ವ ಶತ್ರುವಿಲಿ ಮೂರ್ಖತನ। ಸ
ನ್ಮಿತ್ರದಿ ಶತ್ರುತ್ವವು ಮೂರ್ಖ ತನ ॥ 2 ॥
ಸಾಯೆ ನಾನೆಂಬುದು ಮೂರ್ಖತನ । ಹರಿ
ಕಾಯನು ಎಂಬುದು ಮೂರ್ಖತನ ॥
ತೋಯಜೋದ್ಭವ **ಪ್ರೀತಜಗನ್ನಾಥ ವಿಠ್ಠಲ**।
ರಾಯನ ಮರೆವುದು ಮೂರ್ಖತನ ॥ 3 ॥

ರಾಗ- ಹಂಸಾನಂದೀ ತಾಳ- ಆದಿ
ತಪ್ಪುಗಳೆಲ್ಲವು ನೊಪ್ಪಿಕೊಳ್ಳಬೇಕು। ಹೇ ದೇವ ಪರಾಕು ॥ಪ॥
ಅಪ್ಪನಂದದಲಿ ನೀಸಲಹಲಿ ಬೇಕು। ಮನ್ನಿಸು ಈ ವಾಕು ॥ಅ.ಪ॥
ಕಾಯವಚಮನದಿ ಮಾಡಿದ ಬಹುತಪ್ಪು।ನೀ ಮಾಡುವುದೊಪ್ಪು।
ಮಾಯ ಸಂಸೃತಿಲಿ ಮಮತೆ ಇಟ್ಟಪಾಪ। ದೂರ ಮಾಡೊ ಗೋಪ।
ಹೇಯ ವಿಷಯದೊಳು ತೊಳಲಿ ಬಳಲುತಿಹೆನು। ಉದ್ಧರಿಸೋ ನೀನು।
ಮಾಯಾರಮಣನೆ ವಂದಿಪೆ ಚರಣ। ವಂದಿತ ಗೀರ್ವಾಣಾ ॥ 1 ॥
ಕಡಲದಡಿದೊಳಗೆ ನಿಂದು ಶೋಭಿಸುವನೆ। ದೂರ ನಿನಗೆ ನಾನೇ।
ಕಡು ಕರುಣೆಯೆ ಸಿರಿವೇಣುಕೃಷ್ಣಮೂರ್ತಿ। ಕೇಳಿದೆ ತವ ಕೀರ್ತಿ।
ಕಡಕಡಿಸುವ ಭವವೆಂಬುವ ಅಗ್ನಿಯಲಿ। ಬೆಂದೆ ಕೇಳೆಲೊ ಬಲಿ।
ಮೃಡವಂದಿತ ಪದ ಜಡಜಭವನತಾತ। ಹೇ ಮೋಕ್ಷಪ್ರದಾತ ॥ 2 ॥
ಕಮಲಮುಖನೆ ಪದಕಮಲವ ತೋರೋ। ದಯವನು ನೀ ಬೀರೋ।
ವಿಮಲಬುದ್ಧಿಯನು ಇತ್ತುಪಾಲಿಸೆನ್ನ। ದಯಗುಣಸಂಪನ್ನ।
ರಮೆಯರಸನೆ **ಸುಪ್ರೀತಜಗನ್ನಾಥ** ।**ವಿಠಲ**ಭಕುತ ಪ್ರೀತ।
ನಮಿಸುವೆ ನಿಮ್ಮಯ ಪದಯುಗ ನಿರುತಾ। ಹರುಷದಿಂದ ಬರುತಾ ॥ 3 ॥

ರಾಗ- ಅಭೇರಿ ತಿಶ್ರ ತ್ರಿಪುಟ
ಮುಸುರೆ ತೊಳೆಯಬೇಕು। ಮನದ। ಮುಸುರೆ ತೊಳೆಯಬೇಕು ॥ಪ॥

ಮುಸುರೆ ತೊಳೆದು ಪಾಕಮಾಡಿ । ವಾಸುದೇವನಿಗರ್ಪಿಸಬೇಕು ॥ಅ.ಪ॥
ಜ್ಞಾನವೆಂಬ ಮಡುವಿನಿಂದ । ಧ್ಯಾನವೆಂಬೊ ಜಲವ ತಂದು ।
ಮನದಲಿಪ್ಪ ರಾಗದ್ವೇಷ । ಇನಿತು ಇಲ್ಲದೆ ಹೋಗೋಹಾಂಗೆ ॥ 1 ॥
ಸುಜ್ಞಾನೆಂಬ ಹುಣಿಸೆಯಿಕ್ಕಿ । ಅಜ್ಞಾನೆಂಬ ಮಸಿಯ ತಿಕ್ಕಿ ।
ಪ್ರಾಜ್ಞನಲ್ಲಿ ಮನವ ಸಿಕ್ಕಿ । ಅಜ್ಞನಾದರೆ ಯಮಗೆ ಸಿಕ್ಕಿ ॥ 2 ॥
ಹರಿಯ ನಾಮದಿಂದ ಶುದ್ಧಿ । ಹರಿಯ ನಾಮದಿಂದ ಸಿದ್ಧಿ ।
ಹರಿಯು **ಪ್ರೀತ ಜಗನ್ನಾಥ । ವಿಠಲ**ಭವವ ಪರಿಹರಿಸುವ ॥3॥

-8- ಇಂದ್ರಿಯ ಜಯ ಸುಳಾದಿ -

ಕೈಯ ಸುಟ್ಟಿತು ದುಷ್ಟ ಕರ್ಮಾಚರಣೆಯಿಂದ ।
ಬಾಯ ಸುಟ್ಟಿತು ಬಲುಪರರನಿಂದೆಯಿಂದ ।
ಕಾಯ ಸುಟ್ಟಿತು ದುಷ್ಟ ಅನ್ನ ಸೇವನದಿಂದ ।
ಶ್ರೀಯಳರಸ ಪ್ರೀತಜಗನ್ನಾಥ ವಿಠ್ಠಲನೆ ।
ನೋಯದಂದದಿ ಮಾಡು ತೋಯಜೋದ್ಭವನಯ್ಯ ॥
ರಸನ ಸುಟ್ಟಿತು ನಿನ್ನ ನೈವೇದ್ಯ ಸವಿಯದೆ ।
ಶಿಶನ ಸುಟ್ಟಿತು ಅಗಮ್ಯಾಗಮನದಿಂದ ।
ನಾಸಿಕ ಪರವನಿತೆ ನಿರ್ಮಾಲ್ಯಗಂಧದಿಂ ।
ವಶವು ಇಲ್ಲವು ಕಾಣೊ ಏಸು ಪೇಳಲಯ್ಯ ।
ವಾಸುಕಿಶಯ **ಪ್ರೀತಜಗನ್ನಾಥ ವಿಠಲ** ॥

ನೇತ್ರ ಸುಟ್ಟಿತು ಪರನಾರಿ ದರ್ಶನದಿಂದ ।
ಶ್ರೋತ್ರ ಸುಟ್ಟಿತು ಲೋಕವಾರ್ತೆಶ್ರವಣದಿಂದ ।
ಗಾತ್ರ ಸುಟ್ಟಿತು ನಿನ್ನವರ ಸೇವೆಯ ಬಿಟ್ಟು ।
ಯಾತ್ರೆ ಮಾಡದೆ ಪಾದ ಸುಟ್ಟಿತು ಕಾಣಯ್ಯ । ವಿ
ಧಾತೃಪಿತ **ಪ್ರೀತ ಜಗನ್ನಾಥ ವಿಠಲ**ಯ್ಯ ॥

ಕರ್ಮ ಇಂದ್ರಿಯಗಳ ಜಯವು ಇಲ್ಲವು ಕಾಣೊ ।
ಮರ್ಮವ ತಿಳಿಯೆ ಚಿದಿಂದ್ರಿಯ ಜಯಿಸಲು ।
ಘರ್ಮದಿ ಬೇಯುವೆ ಮನಸಿನ ಜಯವಿಲ್ಲ।
ಶರ್ಮದ **ಸುಪ್ರೀತಜಗನ್ನಾಥವಿಠಲ**ನೆ ।
ಕರ್ಮಪ್ರವಹದೊಳು ತೇಲಿಮುಳುಗುತಲಿರುವೆ ॥

ಎಷ್ಟು ಪೇಳಲಿ ದೇವ ಹೆಚ್ಚಿದ ಅಘಗಳಾ ।
ಸೃಷ್ಟಿಗೀಶನೆ ನಿನಗೆ ಪೇಳುವುದೇನಯ್ಯ ।
ದೃಷ್ಟಿಯಿಂದಲಿ ಎನ್ನ ನೋಡೋ ನೋಡೋ ದೇವ ।
ಇಷ್ಟನೆ **ಪ್ರೀತಜಗನ್ನಾಥ ವಿಠ್ಠಲ**ರಾಯ ।
ಕಷ್ಟಕೋಟಲೆ ಪರಮೇಷ್ಠಿಪಿತನೆ ಕಳೆ ॥

ಇಂದ್ರಿಯ ಜಯಕೊಡು ಇಂದ್ರಿಯೇಶನೆ ದೇವ ।
ಇಂದಿರೇಶ **ಪ್ರೀತ ಜಗನ್ನಾಥವಿಠಲ** ॥

-9-

ಲೋಕವಾರ್ತೆಯ ನಾಡಿ ಬಲು ಕಾಲ ಹೋಯಿತೋ ।
ನೈಕಮಹಿಮನೆ ನಿನ್ನ ತುತಿ ಮಾಡಲಿಲ್ಲವೋ ।
ಲೋಕನಾಥನೆ ನಿನ್ನ ಗುಣಕೀರ್ತನೆಯ ಕೊಡೊ ।
ಶೋಕಹರ **ಸುಪ್ರೀತ ಜಗನ್ನಾಥವಿಠಲ** ॥

-10-

ಲೌಕಿಕ ವಿಚಾರವನು ಬಿಡು ।ನಮ್ಮ
ಲೋಕೇಶನ ವಿಚಾರಮಾಡು ॥
ನರರ ಕೊಂಡಾಡುವುದ ಬಿಡು ।ನಮ್ಮ
ನರಹರಿಯ ಚರಣ ಕೊಂಡಾಡು ॥
ವಿಷಯಗಳಲಿ ರಾಗವ ಬಿಡು ।ನಮ್ಮ

ಹೃಷೀಕೇಶನಲಿ ರಾಗ ಮಾಡು ॥
ಇಂದ್ರಿಯಂಗಳ ಭೋಗವ ಬಿಡು । ನಮ್ಮ
ಇಂದಿರೇಶನಲಿ ಯೋಗ ಮಾಡು ॥
ಮರಳಿ ಮರಳಿ ಬರುವುದನು ಬಿಡು । ನಮ್ಮ
ಹರಿಭುವನದಿ ಸಂಚಾರ ಮಾಡು ॥
ಪರಮ ಪುರುಷ **ಪ್ರೀತ ಜಗನ್ನಾಥವಿಠ್ಠ**ಲನ ।
ನಿರುತ ಬಿಡದಲೆ ಸ್ಮರಿಸೆ ಹರುಷದಲಿ ಬೀಡು ॥

-11-

ಕಂಡ ಕಂಡವರಿಗೆ ಎರಗಿ ನಾನೊಂದೆನೋ ।
ಕಂಡಕಂಡಲ್ಲಿಗೆ ತಿರುಗಿ ಬೆಂಡಾದೆನೋ ।
ಕಂಡಕಂಡ ಜಲದಿ ಮುಳುಗಿದೆನೋ ।
ಕಂಡ ಕಂಡುದ ನೋಡಿ ನೇತ್ರಗಳು ನೊಂದವೋ ।
ಕಂಡ ಕಂಡುದ ಕೇಳಿ ಶ್ರೋತ್ರಗಳುನೊಂದವೋ ।
ಕಂಡುಕಂಡುದಾಘ್ರಾಣಿಸಿ ನಾಸಿಕವು ಸ್ವಾಮಿ ।
ಬೆಂಡಾಯಿತು ನೋಡು ಪುಂಡರೀಕಾಕ್ಷನೆ।
ಕಂಡಕಂಡವರ ಸಂಶ್ಲೇಷದಿಂದಲಿ ತ್ವಚವು ।
ಬೆಂಡಾಯಿತು ನೋಡು ಚಂಡ ಮಧುಸೂದನ ।
ಕಂಡವರ ಧನದಲ್ಲಿ ಕಂಡವರ ಸತಿಯಲ್ಲಿ।
ಕಂಡವರ ನಿಂದೆಯಲಿ ಭಂಡನಾನಾದೆನೋ ।
ಕಂಡುಕಾಣದಹಾಂಗೆ ಇರಬಹುದೆ ಹೇ ದೇವ ।
ಕಂಡು ಕರುಣದಲಿಂದ ಭಂಡತನ ನೀಗಿಸುತ ।
ಶುಂಡಾಲವರದ ನೀನೆನ್ನ ಪಾಲಿಸಬೇಕು ।
ಕಂಡವರನೀರೀತಿ ಬೇಡಿಕೊಂಬುವುದಿಲ್ಲ।
ಮಂಡೆ ಬಾಗುತ ನಿನಗೆ ಜೋಡಿಸುತ ಕರಗಳನು ।

ಹಿಂಡು ದೈವದ ಗಂಡ ಕಣ್ತೆರೆದು ನೋಡೆನುತ ಉ।
ದ್ದಂಡಮಹಿಮನೆ ನೀನೆ ಗತಿಯೆನಗೆ ಎಂದೆನುತ।
ಕಂಡು ನಿನ್ನಯ ಕರುಣಪೊಂದಿದವರ ಭಾಗ್ಯ।
ಅಂಡಜ ವಾಹನನೆ ಬಂದೆ ತವ ಚರಣಕ್ಕೆ ಬ್ರ।
ಹ್ಮಾಂಡ ದೊಡೆಯ ಪ್ರೀತ **ಜಗನ್ನಾಥವಿಠ್ಠಲ್ಲ**।
ಹೆಂಡತಿಯ ಒಡಗೂಡಿ ದಯಮಾಡು ಧೊರೆಯೇ ॥

-12-

ಮೂರು ಕಾಲದದರ್ಶಿ ತಾನಾದರೆಯು ಸರಿಯೆ।
ಮೂರು ಲೋಕೋದ್ಧರಣ ಸಮರ್ಥನಾದರು ಸರಿಯೆ।
ಮೂರಾರಿನುತನಾಜ್ಞೆಯೆಂದು ಶ್ರುತಿಸ್ಮೃತ್ಯುಕ್ತಾ।
ಚಾರಮಾಡಲಿಬೇಕು **ಸುಪ್ರೀತ ಜಗನ್ನಾಥ**।
ಸಿರಿವಿಠ್ಠಲನು ಪೇಳ್ದನಕ್ರೂರನನೋಡು ॥

ಶ್ರೀತುಲಸೀ ಸ್ತೋತ್ರಗಳು

ರಾಗ- ತಿಲಂಗ್ ತಾಳ : ಆದಿತಾಳ

ವೃಂದಾವನದ ಸೇವೆಯ ॥ ಪ ॥
ವೃಂದಾವನದ ಸೇವೆಮಾಡಿದವರಿಗೆ ಭೂ-
ಬಂಧನ ಬಿಡುಗಡೆಯಾಗುವುದು ॥ ಅ.ಪ ॥
ಏಳುತಾಲಿದಿರೆ ಕಂಡು ಕರವ ಮುಗಿದು ಬೇಗೀ-
ರೇಳು ಲೋಕದ ಮಾತೆಗೆ ನಮೋಯೆಂಬೊದಲ್ಲದೆ
ಏಳು ಪ್ರದಕ್ಷಿಣೆಯನು ಮಾಡಿದವರಿಗೆ
ಏಳು ಜನ್ಮದ ಪಾಪ ಹಿಂಗುವುದು ॥ 1 ॥
ಸಾರಿಸಿ ರಂಗವಲ್ಲಿಯನಿಟ್ಟು ಮೇಲೆ ಪ-

ನ್ನೀರನೆರೆದು ಪ್ರತಿದಿವಸದಲ್ಲಿ
ಸಾರಿ ಸೇವೆಯ ಮಾಡಿದವರಿಗೊಲಿದು ಮುನ್ನ
ಸೇರಿಸುವಳು ತನ್ನ ಪದವಿಯನು ॥ 2 ॥
ಒಡೆಯನ ಮನೆಗೆ ನೀರುತರುತಲೊಬ್ಬಳು
ಎಡಹಿ ಬಿದ್ದಳು ತನ್ನ ಕೊಡನೊಡೆಯೆ
ಸಿಡಿದು ಶ್ರೀತುಳಸಿಗೆ ತಂಪಾಗಲು ಮುನ್ನ
ಕೊಡಳೆ ಅವಳಿಗೆ ಮೋಕ್ಷಪದವಿಯನು ॥ 3 ॥
ಕೇಶವ ಎಂಬ ಭೂಸುರಗೆ ಶುಕಯೋಗಿ ಉಪ-
ದೇಶಿಸಿದನು ತನ್ನ ಭಾಗವತದಲ್ಲಿ-
ಕಾಸುವೀಸ ಹೊನ್ನ ಹಣ ಸವೆಯದಾಮುನ್ನ ನಿ-
ರಾಶೆಯಿಂದಲಿ ಮುಕ್ತಿ ದೊರಕುವುದು ॥ 4 ॥
ಪೊಡವಿಗಧಿಕವಾದ ಸೋದೆ ಪುರದ ತ್ರಿವಿಕ್ರಮ
ಎಡಭಾಗದಲ್ಲಿ ಲಕ್ಷ್ಮಿದೇವಿಯ ಸಹಿತ
ಸಡಗರದಿಂದಲ್ಲಿ **ಹಯವದನ**ನ ಪಾದ
ಬಿಡದೆ ಪೂಜಿಸಿ ಭಕ್ತಿ ಪಡೆವಿರಯ್ಯ ॥ 5 ॥

ವೃಂದಾವನವೇ ಮಂದಿರವಾಗಿಹ ಇಂದಿರೆ ಶ್ರೀ ತುಳಸೀ ॥
ನಂದನವನ ಮುಕುಂದಗೆ ಪ್ರಿಯಳಾದ ಚೆಂದದ ಶ್ರೀ ತುಳಸಿ ॥
ತುಳಸಿಯ ವನದಲಿ ಹರಿಯಿಹನೆಂಬುದ ಶ್ರುತಿಸಾರುತಲಿದೆ ಕೇಳಿ ॥
ತುಳಸೀದರ್ಶನದಿಂದ ದುರಿತಗಳೆಲ್ಲವು ದೂರವಾಗುವವು ಕೇಳಿ ॥
ತುಳಸೀ ಸ್ಪರ್ಶವಮಾಡೆ ದೇಹಪಾವನವೆಂದು ತಿಳಿದಿಲ್ಲವೇನು ಪೇಳಿ ।
ತುಳಸೀ ಸ್ಮರಣೆ ಮಾಡಿ ಸಕಲೇಷ್ಟಗಳ ಪಡೆದು ಸುಖದಿಂದ ನೀವು ಬಾಳಿ ॥1॥
ಮೂಲ ಮೃತ್ತಿಕೆಯನು ಮುಖದಲಿ ಧರಿಸಲು ಮೂಲೋಕ ವಶವಹುದು ।
ಮಾಲೆ ಕೊರಳಲಿಟ್ಟ ಮನುಜಗೆ ಮುಕುತಿ ಮಾರ್ಗವು ತೋರುವುದು ।

ಕಾಲಕಾಲಗಳಲಿ ಮಾಡುವ ದುಷ್ಕರ್ಮ ಕಳೆದು ಬೀಸಾಡುವುದು।
ಕಾಲನ ದೂತರ ಕಳಚಿ ಕೈವಲ್ಯದ ಲೀಲೆಯ ತೋರುವುದು ||2||
ಧರೆಯೊಳು ಸುಜನರ ಮರೆಯದೆ ಸಲಹುವ ವರಲಕ್ಷ್ಮೀ ಶ್ರೀತುಳಸೀ
ಪರಮಭಕ್ತರ ಪಾಪಗಳನೆಲ್ಲ ತರಿದು ಪಾವನ ಮಾಡುವಳು ತುಳಸೀ।
ಸಿರಿ ಆಯು ಪುತ್ರಾದಿ ಸಂಪದಗಳನಿತ್ತು ಹರುಷವೀವಳು ತುಳಸೀ।
ಪುರಂದರವಿಠಲನ ಚರಣಕಮಲಗಳ ಸ್ಮರಣೆಯೀವಳು ತುಳಸೀ ||3 ||

ಕಲ್ಯಾಣಂ ತುಳಸೀ ಕಲ್ಯಾಣಂ || ಪ ||
ಕಲ್ಯಾಣವು ನಮ್ಮ ಕೃಷ್ಣ ಶ್ರೀತುಳಸಿಗೆ। ಬಲ್ಲಿದ ಶ್ರೀವಾಸುದೇವನಿಗೆ || ಅ.ಪ ||
ಅಂಗಳದೊಳಗೆಲ್ಲ ತುಳಸೀ ವನವ ಮಾಡಿ।
ಶೃಂಗಾರವ ಮಾಡೆ ಶೀಘ್ರದಿಂದ।
ಕಂಗಳ ಪಾಪವ ಪರಿಹರಿಸುವ
ಮುದ್ದು ರಂಗ ಬಂದಲ್ಲಿ ನೆಲಸಿಹನು || 1 ||
ಮಿಂದು ಮಡಿಯನುಟ್ಟು ಸಂದೇಹವ ಬಿಟ್ಟು।
ತಂದ ಶ್ರೀಗಂಧಾಕ್ಷತೆಗಳಿಂದ।
ಸಿಂಧುಶಯನನ ವೃಂದಾವನದಲಿ ಪೂಜಿಸೆ।
ಕುಂದದ ಭಾಗ್ಯ ಕೊಡುತಿಹಳು || 2 ||
ಉತ್ಥಾನದ್ವಾದಶಿ ದಿವಸದಲ್ಲಿ ಕೃಷ್ಣ।
ಉತ್ತಮ ತುಲಸಿಗೆ ವಿವಾಹವ ||
ಚಿತ್ತನಿರ್ಮಲರಾಗಿ ಮಾಡಿದವರಿಗೆ।
ಉತ್ತಮ ಗತಿಯೀವ **ಪುರಂದರವಿಠಲ** || 3 ||

ಎಲ್ಲಿ ಶ್ರೀತುಳಸಿಯ ವನವು। ಅಲ್ಲೊಪ್ಪುವರು ಸಿರಿ-ನಾರಾಯಣರು || ಪ ||
ಗಂಗೆ ಯಮುನೆ ಗೋದಾವರಿ ಕಾವೇರಿ।

ಕಂಗೊಳಿಸುವ ಮಣಿಕರ್ಣಿಕೆಯು ॥
ತುಂಗಭದ್ರೆ ಕೃಷ್ಣವೇಣಿ ತೀರ್ಥಗಳೆಲ್ಲ।
ಸಂಗಡಿಸುತ ವೃಕ್ಷ ಮೂಲದಲ್ಲಿರುವವು ॥ 1 ॥
ಸರಸಿಜಭವ ಭವ ಸುರಪ ಪಾವಕ ಚಂ-
ದಿರ ಮೊದಲಾದವರು ॥
ಸಿರಿರಮಣನ ಆಜ್ಞೆಯಿಂದಲಿ ಅಗಲದಂತೆ।
ತರುಮಧ್ಯದೊಳು ನೆಲಸಿಪ್ಪರು ॥ 2 ॥
ಋಗ್ವೇದ ಯಜುರ್ವೇದ ಸಾಮ ಅಥರ್ವಣ।
ಅಗ್ಗಳಿಸಿದ ವೇದ ಘೋಷಗಳು ॥
ಆಗ್ರಭಾಗದಲಿವೆ ಬೆಟ್ಟದೊಡೆಯನಲ್ಲಿ।
ಶೀಘ್ರದಿ ಒಲಿವ **ಶ್ರೀಪುರಂದರವಿಠಲ** ॥ 3 ॥

ವೃಂದಾವನದೇವಿ ನಮೋನಮೊ -ಚೆಲ್ವ।
ಮಂದರಧರನ ಮನಃ ಪ್ರಿಯಳೆ ॥ ಪ ॥
ನಿನ್ನ ಸೇವಿಸಿ ಉದಕವನೆರೆಯಲು।
ಮುನ್ನ ಮಾಡಿದ ಪಾಪವಳಿಯುವುದು ॥
ಎನ್ನ ಇಪ್ಪತ್ತೊಂದು ಕುಲದವರಿಗೆ ಎಲ್ಲ।
ಉನ್ನತ ವೈಕುಂಠಪದವೀವಳೇ ॥ 1 ॥
ಒಂದೊಂದು ದಳದಲಿ ಒಂದೊಂದು ಮೂರುತಿ।
ಸಂದಣಿಸಿವೆ ಬಹು ಗುಪಿತದಲಿ ॥
ಒಂದು ಕುಂಕುಮ ಶಂಖಚಕ್ರವಿರಿಸಿದರೆ।
ತಂದೆ ನಾರಾಯಣ ಕರೆದೊಯ್ಯುವ ॥ 2 ॥
ಹರಿಗೆ ಅರ್ಪಿಸಿದ ತುಳಸಿ ನಿರ್ಮಾಲ್ಯವ।
ಕೊರಳೊಳು ಧರಿಸಿ ಕರ್ಣದೊಳಿಟ್ಟರೆ ॥

ದುರಿತ ರಾಶಿಗಳೆಲ್ಲ ಅಂಜಿ ಓಡುವವು ಶ್ರೀ ।
ಹರಿಯು ತನ್ನವರೆಂದು ಕೈಪಿಡಿವ ॥ 3 ॥
ಹತ್ತು ಪ್ರದಕ್ಷಿಣೆ ಹತ್ತು ವಂದನೆ ಮಾಡೆ ।
ಉತ್ತಮ ವೈಕುಂಠ ಪದವೀವಳು ॥
ಭಕ್ತಿಯಿಂದಲಿ ಬಂದು ಕೈಮುಗಿದವರನು ।
ಕರ್ತೃನಾರಾಯಣ ಕರೆದೊಯ್ವನು ॥ 4 ॥
ಆವಾವ ಪರಿಯಲಿ ಸೇವೆಯ ಮಾಡಲು । ಪಾವನ ವೈಕುಂಠ ಪದವೀವಳೇ ॥
ದೇವ **ಶ್ರೀಪುರಂದರವಿಠಲರಾಯನ ।**
ದೇವಿ ನಿನ್ನ ಮುಟ್ಟಿ ತ್ರಾಹಿ ಎಂಬೆ ॥5॥

ಶ್ರೀ ತುಳಸಿಯ ಸೇವಿಸಿ ॥ ಪ ॥
ಶ್ರೀ ತುಳಸಿಯ ಸೇವೆ ಪ್ರೀತಿಯಿಂದಲಿ ಮಾಡೆ ।
ಗಾತರದ ಮಲವಳಿದು ಮಾತೆಯಂಬನಿತರೊಳು ।
ಪಾತಕ ಪರಿಹರಿಸಿ ಪುನೀತರನು ಮಾಡುವಳು
ಯಾತಕನುಮಾನವಯ್ಯ ॥ಅ ಪ ॥
ಸುಧೆಗಡಲ ಮಥಿಸುವಾ ಸಮಯದಲಿ ವೈದ್ಯನಾಗಿ ।
ಪದುಮನಾಭನು ತಾನು ಉದುಭವಿಸಿ ಬರಲಂದು
ಉದುರಿದವು ಕಣ್ಣಿಂದ ಉದಕವುತ್ಸಹದಿಂದಲದೆ ತುಳಸಿನಾಮವಾಗೆ ॥
ತ್ರಿದಶರೊಂದಿಗೆ ಮೋದದಲಿ ಕೊಂಡಾಡಿದರು
ಒದಗಿ ಸುಜನರು ತಮ್ಮ ಸದನದೆಡೆಗೆ ನಿತ್ಯ ಸತ್ಪದವಿಗೆ
ಸಿದ್ಧವೆಂದು ಮುದದಿಂದ ತಿಳಿದು ವೃಂದಾವನವ ರಚಿಸಿದರೈ ॥ 1 ॥
ಮೂಲದಲಿ ಸರ್ವತೀರ್ಥಗಳುಂಟು ತನ್ಮಧ್ಯದಲಿ
ಕಾಲಮೀರದೇ ಸರ್ವನದ ನದಿಗಳಾವರಣ ಮೇಲೆ ನಳ
ಒಂದರಲಿ ಒಂದೊಂದು ಮೂರುತಿಯ ಆಲಯವಾಗಿರುವುದು ॥

ಮೂರ್ಲೋಕಗಳ ಧರ್ಮವ್ರತಕೆ ಮಿಗಿಲೆನಿಸುವುದು
ನೀಲಮೇಘಶ್ಯಾಮಗರ್ಪಿಸಿದ ತುಲಸಿ ನಿರ್ಮಾಲ್ಯವನು
ಸತತ ಕರ್ಣದಲಿ ಧರಿಸಿದ ಮನುಜ ಕಾಲನಾಳಿಗೆ ಶೂಲನೋ ॥ 2 ॥
ಉದಯದೊಳಗೆದ್ದು ನೀರೆರೆದು ಮಜ್ಜನಗೈದು ತುದಿಬೆರಳಿನಿಂದ
ಮೃತ್ತಿಕೆಯ ಘಣೆಯೊಳಿಟ್ಟು ಮುದದಿಂದಲೊಂದು
ಪ್ರದಕ್ಷಿಣೆ ನಮಸ್ಕಾರ ತದನಂತರದಲಿ ಭಜಿಸಿ ॥
ವದನದೊಳುಗೈಯೆ ಧರೆಯೊಳಗಿದ್ದ ಸರ್ವನದ ನದಿಗಳಿಗೆ
ನೂರ್ಮಡಿಯ ಯಾತ್ರೆಮಾಡಿ ಫಲ ಒದಗುವುದು
ಹಿಂದಣಾನಂತ ಜನ್ಮಗಳಘವ ತುದಿಮೊದಲು ದಹಿಪುದಯ್ಯ ॥ 3 ॥
ಆವವನ ಮನೆಯಲ್ಲಿ ತುಳಸಿ ಸಾಲಿಗ್ರಾಮ
ಆವವನ ಮನೆಯಲ್ಲಿ ಹರಿದಾಸರಾ ಕೂಟ
ಆವವನ ಭುಜದಲ್ಲಿ ತಪ್ತಮುದ್ರಾಂಕಿತವು ಪಾವಮಾನಿಯ ಮತದೊಳು ॥
ಆವವನು ಕಾಲತ್ರಯವ ಕಳೆವನಾವಲ್ಲಿ
ಶ್ರೀವಾಸುದೇವ ಮುನಿ ದೇವಾದಿಗಣ ಸಹಿತ
ಕಾವುತ್ತಲಿಪ್ಪ ಬಲಿಗೊಲಿದಂತೆ ತೊಲಗದೆಲೆ ಭಾವಿಸಿರಿ ಭಾವಜ್ಞರು ॥ 4 ॥
ಕಂಡರೆ ದುರಿತಕ್ಕೆ ಕೆಂಡವನು ಬೀರುವುದು
ಕೊಂಡಾಡಿದರೆ ಪುಣ್ಯವಪರಿಮಿತವುಂಟು ಮೈ
ದಿಂಡುಗೆಡಹಿದರೆ ಪುನರಪಿ ಜನ್ಮವಿಲ್ಲ ಸರಿ ದಂಡವಿಟ್ಟವ ಮುಕ್ತನೋ ॥
ಚಂಡಾಲಕೇರಿಯೊಳು ಇರಲು ಹೀನಯವಲ್ಲ ಪಾಂಡುರಂಗಕ್ಷೇತ್ರ
ಸರಿ ಮಿಗಿಲು ಎನಿಸುವುದು ತಂಡತಂಡದ ಕುಲಕೆ
ಅವರವರ ಯೋಗ್ಯಫಲ ಕಂಡವರಿಗುಂಟೆ ಅಯ್ಯ ॥ 5 ॥
ಚಿತ್ತಶುದ್ಧನು ಆಗಿ ಮುಂಜಾವಿನೊಳು ತುಳಸಿ
ಸ್ತೋತ್ರವನೆ ಮಾಡುತ್ತ ದಿವ್ಯವಾಗಿಹ ತ್ರಿದಳ
ಪ್ರತ್ಯೇಕ ಪಾತ್ರೆಯಲಿ ತೆಗೆದು ಶೋಧಿಸಿ ತುಂಬಪತ್ರಾದಿಯಲಿ ತಾರದೆ ॥

ಮತ್ತೆ ವಸ್ತ್ರದಿ ಹಸ್ತ ಶಿಲೆಯರ್ಕ ಏರಂಡ ಪತ್ರದಲಿ
ತಾರದಲೆಭೂಮಿಯೊಳಗಿದೊ ಪೂರ್ವೋತ್ತರ-
ಭಿಮುಖನಾಗಿ ಭಕ್ತಿಯಿಂ ತರಬೇಕು ಹೊತ್ತು ಮೀರಿಸಲಾಗದೋ ॥ 6 ॥
ಕವಿಮಂಗಳರವಿವಾರ ವೈಧೃತಿವ್ಯತೀಪಾತ ರವಿ-ಶಶಿಯ
ಸಂಗಮ ಪರ್ವಣಿ ಪುಣ್ಯಕಾಲ ದಿವಸ
ದ್ವಾದಶಿ ಶ್ರೇಷ್ಠ ಉಪರಾಗ ಪಿತೃಶ್ರಾದ್ಧ ಇವುಗಳಲಿ ತೆಗೆಯದಿರಿರಿ ॥
ನವವಸನ ಪೊದ್ದು ಊಟವಮಾಡಿ ತಾಂಬೂಲ ಸವಿ-
ಯುತ್ತ ಮುಟ್ಟದಿರಿ ಯುವತಿ ಶೂದ್ರರಿಂ ತರಿಸುವುದುಚಿತ-
ವಲ್ಲೆಂದು ತಿಳಿದು ಕೊಂಡಾಡುತಿರಿ ದಿವಸ ದಿವಸಗಳೊಳಯ್ಯ ॥7॥
ದಳವಿದ್ದರೆ ಒಳಿತು ಇಲ್ಲದಿದ್ದರೆ ಕಾಷ್ಠ ಎಲೆ
ಮೃತ್ತಿಕೆಗಳಿಂದ ಪೂಜೆ ಮಾಡಲಿಬಹುದು ತುಳಸಿ
ನಿರ್ಮಾಲ್ಯವಾದರು ತ್ರಿವಾರದಲಿ ತೊಳೆತೊಳೆದು ಏರಿಸಲು ಬಹುದು ॥
ತುಳಸಿ ಒಣಗಿದ್ದರೂ ಲೇಶದೋಷಗಳಿಲ್ಲ ತುಳಸಿ
ವಿರಹಿತವಾದ ಪೂಜೆ ಸಲ್ಲದು ತುಳಸೀ ತುಳಸೀ ಎಂದು
ಸ್ಮರಣೆಯಾದರು ಮಾಡಿ ಜಲಜಾಕ್ಷನರ್ಚಿಸಿರೈಯ್ಯಾ ॥ 8 ॥
ತುಳಸಿ ಇಲ್ಲದ ಸದನ ಹೊಲೆಮಾದಿಗರ ಸದನ ತುಳಸಿ
ಇಲ್ಲದ ಬೀದಿ ನರಕಕೆಳೆಸುವ ಹಾದಿ ತುಳಸಿ ಇಲ್ಲದ
ತೀರ್ಥವೆಂದಿಗಿದ್ದರೂ ವ್ಯರ್ಥ ತುಳಸಿ ಬಲು ಪ್ರಾಧಾನ್ಯವೋ ॥
ತುಳಸಿ ಮಿಶ್ರಿತವಾದ ನೈವೇದ್ಯ ಗತಿಸಾಧ್ಯ ತುಳಸಿ
ಧರಿಸಿದ ದೇಹ ಪರಮಸಾರ್ಥಕವಯ್ಯ ತುಳಸಿ-
ದಳ ಹರಿಗರ್ಪಿಸಿದವನ ಪುಣ್ಯ ನೆಲೆಯ ನಾ ಕಾಣೆನಯ್ಯ ॥ 9 ॥
ಶಿವನ ಸತಿ ಪ್ರಹ್ಲಾದ ನಾರದ ವಿಭೀಷಣನು ಧ್ರುವ
ಅಂಬರೀಶ ಶಶಿಬಿಂದು ರುಕ್ಮಾಂಗದನು ಇವರೆ
ಮೊದಲಾದವರು ಭಕ್ತಿಪೂರ್ವಕದಲೀ ವಿವರವನು ತಿಳಿದರ್ಚಿಸಿ ॥

ತವಕದಿಂ ತಂತಮ್ಮ ಘನಪದವನ್ನೈದಿದರು
ಭುವನದೊಳಗುಳ್ಳ ನಿರ್ಮಲ ಜನರು ಭಜಿಸಿದರು
ಜವಭಟರನೋಡಿಸೀ ಜಡದೇಹವನು ನೀಗಿ ಭವದೂರರಾದರೈಯ್ಯ ॥10॥
ಉದಯಕಾಲದೊಳೆದ್ದು ಆವನಾದರೂ ತನ್ನ ಹೃದಯ
ನಿರ್ಮಲನಾಗಿ ಭಕುತಿ ಪೂರ್ವಕದಿಂದ ಸದಮಲಾ
ತುಳಸಿಯನು ಸ್ತೋತ್ರಮಾಡಿದ ಕ್ಷಣದಿ ಮದಗರ್ವಪರಿಹಾರವೊ ॥
ಇದೆ ತುಳಸಿ ಸೇವಿಸಲು ಪೂರ್ವದಲಿ ಕಾವೇರಿ ನದಿಯ
ತೀರದಲೊಬ್ಬ ಭೂಸುರ ಪದಕೆ ಪೋದ ಪದೆಪದೆಗೆ
ಸಿರಿ **ವಿಜಯವಿಠಲಗೆ** ಪ್ರಿಯಳಾದ ಮದನತೇಜಳ ಭಜಿಸಿರೈಯ್ಯ ॥ 11 ॥

॥ಶ್ರೀ ಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥